ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2015 ಮಾಸ ಪತ್ರಿಕೆ

ಸಂಪುಟ : 37
ಸಂಚಿಕೆ : 11
ಪುಟ : 12
ಬೆಲೆ : ₹ 5/-

ರಕ್ಷಾಬಂಧನ ಉತ್ಸವವು
ಇಂತಹ ಸಜ್ಜನ ಸಂದರ್ಭ
ಕರ್ತವ್ಯ ಪಥದ ದಿಕ್ಕು ತೋರಲಿ;
ಅನ್ಯಾಯ, ಅಸತ್ಯಗಳಿಗೆ ನಮ್ಮ ಬೆಂಬಲವಿಲ್ಲ
ಎಂದು ಮನಸಾ, ಕಾಯಾ, ವಾಚಾ
ಘೋಷಿಸಲು ಧರಿಸಿದ ರಕ್ಷೆಯು
ನಿರ್ಧಾರದ ಸಂಕೇತವಾಗಲಿ.



## ರಕ್ಷಾಬಂಧನದ ಶುಭಾಶಯಗಳು




3 ಕಾರ್ಯಕರ್ತರ ಪಂಚಶೀಲಗಳು

ಡಾ॥ ಎಸ್. ರಾಧಾಕೃಷ್ಣನ್ – ಒಂದು ನೆನಪು 5

6 ಗುರುವಂದನಾ ಕಾರ್ಯಕ್ರಮಗಳು

A Journal of Karnataka State Secondary Teachers' Association

# ಸಂಪಾದಕೀಯ

ನಮ್ಮ ದೇಶದ ಅತ್ಯುನ್ನತ ಸ್ಥಾನವಾದ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದವರಲ್ಲಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರು ಜನಮನದಲ್ಲಿ ಸದಾಕಾಲ ಚಿರಸ್ಮರಣೀಯರಾಗಿ ಮನೆ ಮಾಡಿರುವವರು. ಡಾ॥ ಅಬ್ದುಲ್ ಕಲಾಂರವರು ಮೂಲತಃ ಶಿಕ್ಷಕರು ಎನ್ನುವುದು ಶಿಕ್ಷಕರಾದ ನಮಗೆಲ್ಲ ಹೆಮ್ಮೆಯ ವಿಚಾರ. ಡಾ॥ ಕಲಾಂರವರು ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸಿದ ಅವಧಿಯಲ್ಲೂ, ಅನಂತರವೂ ವಿದ್ಯಾರ್ಥಿ ವೃಂದ, ವಿಜ್ಞಾನದ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದವರು. ಅವರ ಆಸೆಯಂತೆಯೇ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುತ್ತಲೇ ತಮ್ಮ ಕೊನೆಯುಸಿರನ್ನೆಳೆದ ಅದೃಷ್ಟವಂತರು. ಇಂತಹ ಆದರ್ಶ ವ್ಯಕ್ತಿತ್ವದ ಡಾ॥ಎ.ಪಿ.ಜೆ. ಅಬ್ದುಲ್ ಕಲಾಂರವರು ಜುಲೈ 27, 2015 ರಂದು ವಿಧಿವಶರಾದುದು ದೇಶದ ದೌರ್ಭಾಗ್ಯವೇ ಸರಿ.

ಡಾ॥ಎ.ಪಿ.ಜೆ. ಅಬ್ದುಲ್ ಕಲಾಂರವರು ಮನೆಮನೆಗೆ ಪೇಪರ್ ಹಾಕುತ್ತ ಕಡು ಬಡತನ ಮತ್ತು ಸ್ವಂತ ಪರಿಶ್ರಮದಿಂದ ಉನ್ನತ ವಿದ್ಯಾಭ್ಯಾಸವನ್ನು ಗಳಿಸಿ ಶಿಕ್ಷಕರಾಗಿ, ವಿಜ್ಞಾನಿಯಾಗಿ ಅಪಾರವಾದ ಸಾಧನೆಯನ್ನು ಮಾಡಿದವರು. ಆ ಮೂಲಕ ದೇಶಕ್ಕೆ, ಸಮಾಜಕ್ಕೆ ಮಹತ್ತರ ಕಾಣಿಕೆಯನ್ನು ನೀಡಿದರು. ಡಾ॥ಕಲಾಂರವರದು ಬಹುಮುಖ ಪ್ರತಿಭೆಯ ವಿಶಿಷ್ಟ ವ್ಯಕ್ತಿತ್ವ. ಅವರಿಗೆ ವಿಜ್ಞಾನದಲ್ಲಿ ಎಷ್ಟು ಆಸಕ್ತಿಯೋ ಅಷ್ಟೇ ಅಸಕ್ತಿ ಸಂಗೀತದಲ್ಲೂ ಇತ್ತು. ಸಮಯ ದೊರೆತಾಗಲೆಲ್ಲ ವೀಣೆಯನ್ನು ನುಡಿಸುವಷ್ಟು ಪರಿಣತರು. ಕುರಾನ್ ಹಾಗೂ ಭಗವದ್ಗೀತೆಗಳಲ್ಲಿ ಸಮಾನ ಶ್ರದ್ಧೆ, ಜ್ಞಾನವುಳ್ಳವರಾಗಿದ್ದರು. ಅವರು ವಿಜ್ಞಾನಿಯಾಗಿದ್ದ ಅವಧಿಯಲ್ಲಿ ತಯಾರಾದ ಕ್ಷಿಪಣಿಗಳಿಗೆ ವೇದ, ಪುರಾಣಗಳ ಹೆಸರನ್ನು ನೀಡುವಷ್ಟು ಭಾರತೀಯತೆಯನ್ನು ಮೈಗೂಡಿಸಿಕೊಂಡಿದ್ದರು. ಇಂತಹ ಅಪ್ರತಿಮ ವ್ಯಕ್ತಿತ್ವದ ಡಾ॥ ಎ.ಪಿ.ಜೆ. ಕಲಾಂರವರ ನಿಧನಕ್ಕೆ 'ಶಿಕ್ಷಕ ಸಮಾಚಾರ'ದ ಪರವಾಗಿ, ವೈಯುಕ್ತಿಕವಾಗಿ ಶ್ರದ್ಧಾಪೂರ್ವಕ ಶ್ರದ್ಧಾಂಜಲಿ. ಅವರ ಆದರ್ಶಗಳು ಶಿಕ್ಷಕರಾದ ನಮಗೆ ಯಾವಾಗಲೂ ದಾರಿದೀಪವಾಗಲಿ ಎಂದು ಆಶಿಸೋಣ.

ಶಿಕ್ಷಕರಾಗಿ ಅಪಾರವಾದ ಪ್ರತಿಭೆ ಹಾಗೂ ವಿದ್ಯಾರ್ಥಿಗಳ ಪ್ರೀತಿಯನ್ನು ಗಳಿಸಿದ್ದ ಡಾ॥ ಎಸ್. ರಾಧಾಕೃಷ್ಣನ್‌ರವರು ತಮ್ಮ ಪ್ರತಿಭೆಗೆ ಅನುಗುಣವಾಗಿ ರಾಷ್ಟ್ರದ ಉಪರಾಷ್ಟ್ರಪತಿ ಹಾಗೂ ರಾಷ್ಟ್ರಪತಿಗಳ ಸ್ಥಾನವನ್ನು ಅಲಂಕರಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹುದ್ದೆಯಿಂದ ಬಿಡುಗಡೆಗೊಂಡ ಸಂದರ್ಭಲ್ಲಿ ಅವರ ಮನೆಯಿಂದ ರೈಲು ನಿಲ್ದಾಣಕ್ಕೆ ತಾವೇ ಗಾಡಿಯನ್ನು ಎಳೆದುಕೊಂಡು ಬಂದುದಲ್ಲದೆ, ತಮ್ಮ ನೆಚ್ಚಿನ ಗುರುಗಳು ಪ್ರಯಾಣಿಸುವ ಬೋಗಿಯನ್ನು ಸಿಂಗರಿಸುವುದರ ಮೂಲಕ ಅವರಿಗೆ ಮರೆಯಲಾಗದ ತುಂಬು ಹೃದಯದ ಪ್ರೀತಿ, ಗೌರವ, ಭಕ್ತಿಯನ್ನು ಶಿಷ್ಯರು ಮೆರೆದರು. ಒಬ್ಬ ಶಿಕ್ಷಕನಿಗೆ ಇಂತಹ ಶಿಷ್ಯ ವಾತ್ಸಲ್ಯಕ್ಕಿಂತ ಇನ್ನೇನು ತಾನೇ ಬೇಕು? ಇಂತಹ ಆದರ್ಶ ಶಿಕ್ಷಕರನ್ನು ನೆನಪಿಸಿಕೊಳ್ಳುವುದಕ್ಕಾಗಿ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದರ ಮೂಲಕ ಇಡೀ ಸಮಾಜವೇ ಶಿಕ್ಷಕ ವೃಂದವನ್ನು ಸ್ಮರಿಸಿ, ಗೌರವಿಸುವುದು ಸಮಂಜಸವೇ ಸರಿ. ಇಂದಿನ ದಿನಗಳಲ್ಲಿ ಶಿಕ್ಷಕ ದಿನಾಚರಣೆಯಂದು ನೀಡುವ ಪ್ರಶಸ್ತಿಗಾಗಿ ಶಿಕ್ಷಕರು ಹರಸಾಹಸ ಮಾಡುವುದು, ವಶೀಲಿ ನಡೆಸುವುದು ಬೇಸರ ತರಿಸುತ್ತದೆ. ಬದಲಾಗಿ ಶಿಕ್ಷಕರಿಗೆ ಡಾ॥ ರಾಧಾಕೃಷ್ಣನ್ ಹಾಗೂ ಡಾ॥ಅಬ್ದುಲ್ ಕಲಾಂರಂತಹ ಶಿಕ್ಷಕರ ವ್ಯಕ್ತಿತ್ವ, ಆದರ್ಶಗಳು ಪ್ರಭಾವ ಬೀರುವಂತಾಗಲಿ ಎಂದು ಆಶಿಸೋಣ.

ಸಂಪಾದಕರು



## ಸೂಕ್ತಿ

"ಶಿಕ್ಷಣವು ಕೇವಲ ಬೌದ್ಧಿಕ ಶಕ್ತಿಯನ್ನು ವಿಕಸನಗೊಳಿಸಿದರೆ ಸಾಲದು. ಅದು ಮನುಷ್ಯನ ಹೃದಯ ಮತ್ತು ಭಾವನೆಗಳ ಮೇಲೆ ಪ್ರಭಾವ ಬೀರಬೇಕು. ಈ ಪ್ರಭಾವದಿಂದ ವಿದ್ಯಾರ್ಥಿಗಳಲ್ಲಿ ದಯೆ ಮತ್ತು ಅನುಕಂಪ ಎಂಬ ಭಾವನೆಗಳು ಹುಟ್ಟಿಕೊಳ್ಳುತ್ತವೆ. ಮಾನವ ಕಲ್ಯಾಣವೇ ಶಿಕ್ಷಣದ ಮೊದಲ ಗುರಿಯಾಗಬೇಕು".

- ಡಾ॥ ಎಸ್. ರಾಧಾಕೃಷ್ಣನ್

## ಪರಿವಿಡಿ


- ಕಾರ್ಯಕರ್ತರ ಪಂಚಶೀಲಗಳು 3
- ರಕ್ಷಾಬಂಧನ 4
- ಡಾ॥ ಎಸ್. ರಾಧಾಕೃಷ್ಣನ್ – ಒಂದು ನೆನಪು 5
- ವಿವಿಧೆಡೆಗಳಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ 6
- ಅನುದಾನಿತ ಶಾಲೆಗಳ ಶಿಕ್ಷಕ ಬಂಧುಗಳ ಜೊತೆ ಮಾಧ್ಯಮಿಕ ಶಿಕ್ಷಕ ಸಂಘ 10
- ಸಾಧಕರನ್ನು ಸ್ಮರಿಸೋಣ 11
- ಮರೆಯಾದ ಮರೆಯಲಾಗದ ಮಾಣಿಕ್ಯ 11
- ಗುರುವಂದನಾ ಚಿತ್ರಗಳು 12



■ ಶ್ವೇತಾದ್ರಿ

# ಕಾರ್ಯಕರ್ತರ ಪಂಚಶೀಲಗಳು

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರು ಪಂಚಶೀಲಗಳನ್ನು ಬೆಳಸಿಕೊಳ್ಳುವಂತೆ ಸಂಘದ ಅಧ್ಯಕ್ಷರೂ, ಮಾಜಿ ಎಂ.ಎಲ್.ಸಿ.ಗಳೂ ಆದ ಪ್ರೊ॥ಬಾಲಕೃಷ್ಣ ಭಟ್ಟರು ಕರೆ ನೀಡಿದರು. 1. ಸಂಘದ ವಿಚಾರಕ್ಕೆ ಬದ್ಧತೆ. 2. ಸಂಘಟನೆಗೆ ನಿಷ್ಠೆ. 3. ಸಂಘದ ವಿಶಿಷ್ಟ ಕಾರ್ಯಪದ್ಧತಿಯ ಅರಿವು. 4. ನಿರಂತರ ಕ್ರಿಯಾಶೀಲತೆ ಹಾಗೂ 5. ಸಮಷ್ಟಿ (ಸಮಾಜ)ಯ ಹಿತ ಇವುಗಳನ್ನು ಅಳವಡಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.**

ದಿನಾಂಕ 19–7–2015ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಹಾಗೂ ಸರ್ವ ಸದಸ್ಯರ ಸಭೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಶ್ರೀಬಾಲಕೃಷ್ಣ ಭಟ್ಟರು ಪ್ರಧಾನಿ ನರೇಂದ್ರ ಮೋದಿಯವರ ಘೋಷಣೆಯಾದ "ಒಂದು ಹೆಜ್ಜೆ ಮುಂದಿಡಿ"ಯನ್ನು ಪಾಲಿಸುವಂತೆ ಕರೆ ನೀಡಿದರು. ಸದಸ್ಯತ್ವದ ಮೂಲಕ ಸಂಘದ ಅಸ್ತಿತ್ವ, ಆದ್ದರಿಂದ ಸದಸ್ಯತ್ವವನ್ನು ಹೆಚ್ಚಿಸಲು ಎಲ್ಲರೂ ಪ್ರಯತ್ನ ಮಾಡುವಂತೆ ಸೂಚಿಸಿದರು. ಮಾಧ್ಯಮಿಕ ಶಿಕ್ಷಕ ಸಂಘದ ಸಾಧನೆ ಹಾಗೂ ವೈಶಿಷ್ಟ್ಯಗಳನ್ನು ಕಾರ್ಯಕರ್ತರಿಗೆ ನೆನಪಿಸಿದರು. ಶಿಕ್ಷಕರಾಗಿ ಕೆಲಸ ಮಾಡುವುದರೊಂದಿಗೆ ಸಮಾಜ ಸೇವೆಗೂ ಮನಸ್ಸು ಮಾಡಬೇಕೆಂದು ಅಧ್ಯಕ್ಷರು ನುಡಿದರು. ಸ್ವಾಮಿ ವಿವೇಕಾನಂದರ ವಿಶಿಷ್ಟ ವ್ಯಕ್ತಿತ್ವದ ಬಗ್ಗೆ ಪ್ರಸ್ತಾಪಿಸಿ ಅವರ ಆದರ್ಶ ನಮ್ಮ ಮುಂದಿರಬೇಕೆಂದು ಹೇಳಿದರು. ಆದಿ ಶಂಕರಾಚಾರ್ಯರು, ಅಬ್ರಹಾಂ ಲಿಂಕನ್, ವಾಲ್ಟ್ ಡಿಸ್ನೆ, ಬಿಲ್ಗೇಟ್ಸ್, ಥಾಮಸ್ ಆಳ್ವ ಎಡಿಸನ್, ಶಿವರಾಮ ಕಾರಂತ ಮುಂತಾದ ಡಿಗ್ರಿ ಪಡೆಯದ ಸಾಧಕರ ಆದರ್ಶಗಳ ಬಗ್ಗೆ ತಿಳಿಯುವ ಅಗತ್ಯತೆಯನ್ನು ಒತ್ತಿ ಹೇಳಿದರು. ಮಾಧ್ಯಮಿಕ ಶಿಕ್ಷಕ ಸಂಘದ ಮುಖವಾಣಿ 'ಶಿಕ್ಷಕ ಸಮಾಚಾರ'ದಲ್ಲಿ ಪ್ರಕಟವಾಗುವ ಲೇಖನದ ವಿಚಾರಗಳು ವಿದ್ಯಾರ್ಥಿಗಳನ್ನು ಬಹಳವಾಗಿ ಆಕರ್ಷಿಸುವುದರಿಂದ ಆ ವಿಚಾರಗಳನ್ನು ತರಗತಿಗಳಲ್ಲಿ ಅಳವಡಿಸಿಕೊಳ್ಳುವಂತೆ ಕಿವಿ ಮಾತು ಹೇಳಿದರು.

ತಮ್ಮ ಜಿಲ್ಲೆಗಳಲ್ಲಿ ಕಳೆದ ವರ್ಷ ನಡೆಸಿದ ಕಾರ್ಯಕ್ರಮಗಳ ವರದಿಯನ್ನು ಜಿಲ್ಲಾಧ್ಯಕ್ಷರು, ಕಾರ್ಯದರ್ಶಿಗಳು ನೀಡಿದ ನಂತರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಶಿವಾನಂದ ಸಿಂಧನಕೇರ ಅವರು ವಾರ್ಷಿಕ ಯೋಜನೆಯನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಪ್ರಮುಖವಾಗಿ 6 ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲಾ ಘಟಕಗಳೂ ಈ ವರ್ಷ ನಡೆಸುವಂತೆ ಸಿಂಧನಕೇರ ಅವರು ಸೂಚಿಸಿದರು. ಅವುಗಳೆಂದರೆ:

**ಗುರುವಂದನಾ ಕಾರ್ಯಕ್ರಮ :** ಆಷಾಢ ಶುಕ್ಲ ಪೂರ್ಣಿಮೆ, 31–7–2015ರಂದು ಗುರು ಪೂರ್ಣಿಮೆ. ಮಹರ್ಷಿ ವೇದವ್ಯಾಸರ ಸ್ಮರಣೆಯ ಈ ಕಾರ್ಯಕ್ರಮದ ಸ್ವರೂಪವನ್ನು ತಿಳಿಸಿದ ಪ್ರಧಾನ ಕಾರ್ಯದರ್ಶಿಗಳು 31–7–15ರಿಂದ 10 ದಿನಗಳ ಅವಧಿಯಲ್ಲಿ ಗುರುವಂದನಾ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರ, ತಾಲೂಕು ಘಟಕಗಳು ಹಾಗೂ ಶಾಲೆಗಳಲ್ಲಿ ಏರ್ಪಡಿಸುವಂತೆ ಸೂಚಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸದಸ್ಯತ್ವ ಅಭಿಯಾನವನ್ನು ಎಲ್ಲಾ ಜಿಲ್ಲೆಗಳವರೂ ಕೈಗೊಳ್ಳುವಂತೆ ಆಗ್ರಹಿಸಿದರು. ರಾಷ್ಟ್ರಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಪ್ರಭಾವ ಬೀರಿದ ಶಿಕ್ಷಕರನ್ನು ಗುರುತಿಸಿ, ಸನ್ಮಾನಿಸುವ ವಿಶಿಷ್ಟ ಕಾರ್ಯಕ್ರಮ 'ಶಿಕ್ಷಕ ಸಮ್ಮಾನ್'. ಇದು ಎಬಿಆರ್ಎಸ್ಎಂನ ಯೋಜನೆಯಾಗಿರುವುದಾಗಿ ಸಭೆಗೆ ತಿಳಿಸಲಾಯಿತು. ಅಕ್ಟೋಬರ್ 9,10,11–2015ರಂದು ಎಬಿಆರ್ಎಸ್ಎಂನ ರಾಷ್ಟ್ರೀಯ ಅಧಿವೇಶನ ಮಹಾರಾಷ್ಟ್ರದ ನಾಗಪುರದಲ್ಲಿ ನಡೆಯಲಿದ್ದು ಅದಕ್ಕೆ ಜಿಲ್ಲೆಯಿಂದ ಭಾಗವಹಿಸಬೇಕಾದ ಪದಾಧಿಕಾರಿಗಳ ವಿವರವನ್ನು ಪ್ರಧಾನ ಕಾರ್ಯದರ್ಶಿಯವರು ನೀಡಿದರು.

ನವೆಂಬರ್–ಡಿಸೆಂಬರ್ ತಿಂಗಳುಗಳಲ್ಲಿ ವಿಷಯದ ಕಾರ್ಯಾಗಾರಗಳನ್ನು ಏರ್ಪಡಿಸುವುದರ ಜೊತೆಗೆ 'ಶಾಶ್ವತ ಜೀವನ ಮೌಲ್ಯಗಳು' ಕುರಿತಾದ ಕಾರ್ಯಾಗಾರವನ್ನು ಜಿಲ್ಲಾ ಘಟಕಗಳು ಏರ್ಪಡಿಸುವಂತೆ ಸೂಚಿಸಲಾಯಿತು. ಜನವರಿ 12 ರಿಂದ 23ರ ನಡುವೆ ಸ್ವಾಮಿ ವಿವೇಕಾನಂದರು ಹಾಗೂ ಸುಭಾಷ್ ಚಂದ್ರಬೋಸರ ಜನ್ಮ ದಿನಗಳ ಅಂಗವಾಗಿ ಎಲ್ಲ ಜಿಲ್ಲೆಗಳಲ್ಲೂ 'ಸಂಕಲ್ಪ ದಿನಾಚರಣೆ'ಯನ್ನು ಆಚರಿಸುವಂತೆ ಸೂಚಿಸಲಾಯಿತು. 8–4–2016ರಂದು ಯುಗಾದಿ ಹಬ್ಬವನ್ನು ಹೊಸ ವರ್ಷವಾಗಿ ಆಚರಿಸುವ ಬಗ್ಗೆ ಒತ್ತುಕೊಡುವಂತೆ ಪ್ರಧಾನ ಕಾರ್ಯದರ್ಶಿಗಳು ಆಗ್ರಹಿಸಿದರು.

ಎಬಿಆರ್ಎಸ್ಎಂನ ಮಹಿಳಾ ವಿಭಾಗದ ಪ್ರಮುಖರಾದ ಶ್ರೀಮತಿ ಸೀತಾಲಕ್ಷ್ಮಿಯವರು ಮಾತನಾಡಿ ಎಬಿಆರ್ಎಸ್ಎಂ ಈ ವರ್ಷವನ್ನು ಮಹಿಳಾ ಅಭಿವೃದ್ಧಿ ವರ್ಷವಾಗಿ ಘೋಷಿಸಿದೆ. ಇದರ ಅಂಗವಾಗಿ ಪ್ರತಿ ಜಿಲ್ಲೆಯಿಂದ ಎರಡು ಕಾರ್ಯಕ್ರಮಗಳನ್ನು

ಪುಟ 9 ಕ್ಕೆ ➢

# ರಕ್ಷಾಬಂಧನ

## ಏಕಾತ್ಮತೆ, ಬಂಧುತ್ವದ ಪ್ರತೀಕ

**ಕಾ. ಶ್ರೀ. ನಾಗರಾಜ**
**ಕೇಶವ ಕೃಪಾ, 74, ರಂಗರಾವ್ ರಸ್ತೆ,**
**ಬೆಂಗಳೂರು _ 4.**

ದೇವಸ್ಥಾನದಲ್ಲಿನ ಮನುಷ್ಯನಿರ್ಮಿತ ಪ್ರತಿಮೆಗೆ ಅಡ್ಡಬಿದ್ದು, ರಕ್ಷಿಸು, ರಕ್ಷಿಸು ಎಂದು ವರ ಕೇಳುವುದು ನಡೆದು ಬಂದ ಪದ್ಧತಿ. ಪ್ರತಿಮೆಯೇ ದೇವರು, ಸರ್ವಶಕ್ತ ಎಂಬ ನಿರ್ಣಯಕ್ಕೆ ಈ ಮೂಲಕ ಬರಲಾಗದು. ದೇವಸ್ಥಾನದಲ್ಲಿನ ಪ್ರತಿಮೆ ಆ ಸರ್ವಶಕ್ತನು ನಮ್ಮ ಮನಸ್ಸಿಗೆ ದೊರಕುವಂತಾಗಲು ಅನುಕೂಲಿಸುವ ಸಾಧನ ಮಾತ್ರ. ಬಿಸಿಲಲ್ಲಿ ನಿಂತಾಗ ಹುಟ್ಟಿ ಬರುವ ನೆರಳಿನಂತೆ, ಪ್ರತಿಮೆಯು ದೇವರ ನೆನಪನ್ನು ತಂದು ಕೊಡುತ್ತದೆ ಮಾತ್ರ. ರಕ್ಷಾ ಬಂಧನದಂದು ಕಟ್ಟಿಕೊಳ್ಳಲಾಗುವ ರಕ್ಷೆಯು ಉನ್ನತ ಧ್ಯೇಯವೊಂದರ ಸಂಕೇತ.

ವಿದ್ಯಮಾನವಿರುವ ಒಟ್ಟು ಸಮಾಜವನ್ನು ಭಗವಂತನ ವಿರಾಟ ಸ್ವರೂಪದ ಸಂಕೇತವೆಂದು ಭಾವಿಸಿಕೊಂಡು, ಒಬ್ಬೊಬ್ಬನೂ ತಾನು ಆ ವಿರಾಟ್ ಸ್ವರೂಪದ ಅಂಶ ಎಂಬ ಶ್ರದ್ಧೆಯಿಂದ ಅದರ ಸೇವೆ ಮಾಡುವ ಸಂಸ್ಕಾರವನ್ನು ಬಹು ಹಿಂದಿನಿಂದಲೂ ನಮ್ಮ ನಾಡಿನಲ್ಲಿ ನೀಡಲಾಗುತ್ತಿದೆ. ಮನುಷ್ಯ ಶರೀರ ರೂಪುಗೊಂಡದ್ದಾದರೂ ಹೇಗೆ? ಅಸಂಖ್ಯ ಜೀವಕೋಶಗಳು ಒಗ್ಗೂಡಿಕೊಂಡು ತಾನೆ? ಇಡೀ ದೇಹದ ಏಳಿಗೆಯ ಮಾತ್ರದಿಂದಲೇ ಅವು ಕೆಲಸ ನಿರ್ವಹಿಸುತ್ತವೆ. ಹೀಗೆ ದೇಹ ಮತ್ತು ಜೀವಕೋಶಗಳು ಬೇರೆಬೇರೆಯಾದುದಲ್ಲ. ಅಷ್ಟು ಮಾತ್ರವಲ್ಲ, ಅವುಗಳಾದರೂ ಅಸ್ತಿತ್ವದಲ್ಲಿರುವುದು ಪರಸ್ಪರ ಸಹಕಾರ ಮತ್ತು ಏಳಿಗೆಯ ಏಕಮಾತ್ರ ಉದ್ದೇಶದಿಂದಲೇ.

ರಕ್ಷಾಬಂಧನ ಎಂದರೇನು? ಶ್ರಾವಣ ಶುದ್ಧ ಪೂರ್ಣಿಮೆಯಂದು ಈ ಉತ್ಸವ ಬರುತ್ತದೆ. ಅಂದು ನಾವೆಲ್ಲರೂ ಪರಸ್ಪರರಿಗೆ ಶುಭಾಶಯ ಹೇಳಿ ರಕ್ಷೆ ಕಟ್ಟಿಸಿಕೊಳ್ಳುತ್ತೇವೆ. ನಾವೂ ರಕ್ಷೆ ಕಟ್ಟುತ್ತೇವೆ. ಹಿಂದುಗಳಿಗೆ ಇದು ಒಂದು ಪುರಾತನ ಉತ್ಸವ. ಪುರಾಣಗಳಲ್ಲಿರುವ ಒಂದು ಶ್ಲೋಕ ಇದರ ಪರಿಚಯ ಮಾಡಿಸುತ್ತದೆ.

**ಯೇನ ಬದ್ಧೋ ಬಲೀ ರಾಜಾ ದಾನವೇಂದ್ರೋ ಮಹಾಬಲಃ ।**
**ತೇನತ್ವಾಂಅನುಬಧ್ನಾಮಿರಕ್ಷೇಮಾಚಲಮಾಚಲ॥**

(ಮಹಾ ಬಲಶಾಲಿಯೂ, ರಾಕ್ಷಸ ರಾಜನೂ ಆಗಿದ್ದ ಬಲಿಯು ಯಾವ ಸದಿಚ್ಛೆಯಿಂದ ಈ ರಕ್ಷೆಯನ್ನು ಕಟ್ಟಿಸಿಕೊಂಡಿದ್ದನೋ ಅದೇ ಭಾವದಿಂದ ರಕ್ಷೆಯನ್ನು ಕಟ್ಟಿಕೊಳ್ಳೋಣ).

ರಕ್ಷಾಬಂಧನವು ಪರಸ್ಪರ ಏಕತೆಯ ಸಂಕೇತ. ಬಂಧುತ್ವದ ಸಂಕೇತ. ರಕ್ಷಣೆಯ ಹೊಣೆ ಹೊರುವ ಸಂಕೇತ. ಸಬಲರು ಅಬಲರಿಗೆ ನೀಡುವ ಆಶ್ವಾಸನೆಯ ಸಂದೇಶ. ಮಾನರಕ್ಷಣೆಯ ಸಂದೇಶ. ರಾಜಸ್ಥಾನದ ಪುರುಷ ಪುಂಗವರಿಗೆ ಪತ್ತಿಗೊಳಗಾಗಿದ್ದ ಕನ್ಯೆಯರು ರಕ್ಷೆ ಕಟ್ಟಿ ಮಾನ ಸಂರಕ್ಷಣೆಯ ಭಿಕ್ಷೆ ಕೇಳಿಕೊಳ್ಳುತ್ತಿದ್ದರು. ಇಡೀ ದೇಶ ಒಂದು, ಜನಾಂಗ ಒಂದು, ಸಂಸ್ಕೃತಿ ಒಂದು, ಜೀವನೋದ್ದೇಶ ಒಂದು. ಪರಸ್ಪರರು ಈ ಭಾವನೆಗಳ ರಕ್ಷಕರು ಎಂಬ ಉದ್ದೇಶದ ಪುನಸ್ಮರಣೆ ಮತ್ತು ಪ್ರತಿಜ್ಞೆಗಳು ರಕ್ಷಾಬಂಧನದಂದು ವಿನಿಮಯವಾಗುವ ರಕ್ಷೆಯ ಮೂಲಕ ಜರುಗುತ್ತಿದ್ದವು. ಪರಕೀಯರ ಆಕ್ರಮಣಕ್ಕೆ ಸತತವಾಗಿ ತುತ್ತಾಗುತ್ತಿದ್ದ ಉತ್ತರ ಪೂರ್ವ ಭಾರತಗಳಲ್ಲಿ ಇದರ ಆಚರಣೆ ವ್ಯಾಪಕವಾಗಿ ಎಂದಿನಿಂದಲೂ ನಡೆದು ಬಂದಿದೆ. ದಕ್ಷಿಣ ಭಾರತದಲ್ಲಾದರೋ ರಕಾಬಂಧನವು ಶ್ರಾವಣ ಶುದ್ಧ ಪೂರ್ಣಿಮೆಯಂದು ಧಾರ್ಮಿಕ ವಿಧಿಯ ಅಂಗವಾಗಿ ಜರುಗುತ್ತಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ರಕ್ಷಾಬಂಧನ ಉತ್ಸವವನ್ನು ವಿಶಾಲ ಪ್ರಮಾಣದಲ್ಲಿ ಆಚರಿಸುವ ಪದ್ಧತಿ ಬೆಳೆದು ಬಂದ ಮೇಲೆ ಇದು ಧಾರ್ಮಿಕ ಮತ್ತು ಸಾಂಸ್ಕೃತಿಕ ಎರಡೂ ನೆಲೆಗಟ್ಟುಗಳಲ್ಲಿ ದೇಶಾದ್ಯಂತ ಜರುಗುತ್ತಿದೆ. ಅಲ್ಲಲ್ಲಿನ ತತ್ಕಾಲೀನ ವಿರಸ ಪ್ರಸಂಗಗಳಲ್ಲೂ ಈ ಉತ್ಸವಾಚರಣೆಯ ಮಹತ್ವ, ಸಂದೇಶಗಳು ಪ್ರಸ್ತುತವಾಗಿರುವುದನ್ನು ವಿವರಿಸುವ ಕಾರಣ ಈ ಉತ್ಸವದಲ್ಲಿ ಸಮಾಜದ ಎಲ್ಲ ವರ್ಗದವರೂ ಉತ್ಸಾಹದಿಂದ ಅರ್ಥಪೂರ್ಣವಾಗಿ ಭಾಗವಹಿಸುವಂತಾಗಿದೆ.

ಪ್ರಚಂಡ ಶಕ್ತಿ ದರ್ಶನ, ಸಾಮೂಹಿಕ ಆಚಾರಗಳು ಹೆಚ್ಚು ಪ್ರಭಾವಶಾಲಿ. ಓರ್ವನ ಕ್ರತು ಶಕ್ತಿಯನ್ನು ಅವು ನೂರ್ಮಡಿಗೊಳಿಸುತ್ತವೆ. ಸಾಮೂಹಿಕ ರಕ್ಷಾಬಂಧನ ಉತ್ಸವಗಳೂ ಅಂತೆಯೇ ಪ್ರಭಾವಶಾಲಿ. 'ನಾನು' ಎಂಬಾತನನ್ನು 'ನಾವು' ಎಂಬ ಎಚ್ಚರ ಸ್ಥಿತಿಗೆ ಮುನ್ನುಗ್ಗಿಸುತ್ತದೆ. ಕಳೆದ 90 ವರ್ಷಗಳಿಂದಲೂ ಸತತವಾಗಿ ನಡೆಯುತ್ತಿರುವ ರಕ್ಷಾಬಂಧನ ಉತ್ಸವಗಳು ದಿನೇ ದಿನೇ ಸಮಾಜ ವ್ಯಾಪಿಯಾಗುತ್ತಿವೆ. ಅದಕ್ಕೆ ರಾಜಕೀಯದ ಲೇಪವಿಲ್ಲ. ಹೆಸರಾಂತವರು, ಧನಿಕರು, ವಿದ್ವಾಂಸರು, ರಾಜಕಾರಣಿಗಳು, ಪಂಡಿತರು, ತಥಾಕಥಿತ ಅಜ್ಞರು, ಬಡಜನರು, ಅಕ್ಷರ ಬಾರದವರು, ಹಳ್ಳಿ ವಾಸಿಗರು – ಹೀಗೆ ಸಮಾಜದ ಸರ್ವರನ್ನೂ ಒಟ್ಟು ತಂದು ಅವರಲ್ಲಿ "ನಾವು" ಎಂಬ ಭಾವ ಉಕ್ಕಿಸುತ್ತಿದೆ. ಮೂಲಭೂತವಾಗಿ ಅಭಿಪ್ರಾಯ ಭೇದ ಇರುವವರೂ ಅಂದು ಅಣ್ಣ ತಮ್ಮ ಆಗುತ್ತಾರೆ. ಈ ಪುಣ್ಯ ಪ್ರವಾಹವು ರಭಸದಿಂದ ಮುನ್ನುಗ್ಗುತ್ತ ಪ್ರಬಲ ಪ್ರವಾಹವಾಗಲಿ. ಸಮಾಜದ ಕಟ್ಟಕಡೆಯ ಬಂಧುವೂ ಏಕಾತ್ಮತೆ, ಸಮರಸತೆ, ಬಂಧುತ್ವ, ಸ್ನೇಹ, ಆತ್ಮೀಯತೆ,

**ಪುಟ 9 ಕ್ಕೆ ➤**

# ಡಾ|| ಎಸ್. ರಾಧಾಕೃಷ್ಣನ್ – ಒಂದು ನೆನಪು

**ಮಮತಾ ಡಿ. ಕೆ.**
**ಸಹಶಿಕ್ಷಕಿ**
**ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ,**
**ರಾಮನಗರ ಜಿಲ್ಲಾ ಮಹಿಳಾ ಪ್ರತಿನಿಧಿ**



"ದಾರ್ಶನಿಕರೆಲ್ಲಾ ದೊರೆಗಳಾಬೇಕು: ದೊರೆಗಳು ದಾರ್ಶನಿಕರಾಗಬೇಕು" ಎಂದು ಕ್ರಿಸ್ತಪೂರ್ವದಲ್ಲಿ ತತ್ವಜ್ಞಾನಿ ಪ್ಲೇಟೋ ಹೇಳಿದುದನ್ನು ಡಾಕ್ಟರ್ ಎಸ್. ರಾಧಾಕೃಷ್ಣನ್‌ರಲ್ಲಿ ಭಾರತ ಪ್ರತ್ಯಕ್ಷವಾಗಿ ಕಂಡಿತೆನ್ನಬೇಕು. ಸಾಧಾರಣ ಹಿಂದೂ ಕುಟುಂಬದಲ್ಲಿ 1888ರ ಸೆಪ್ಟೆಂಬರ್ 5 ರಂದು ವೀರಸಾಮಯ್ಯ ಮತ್ತು ಸೀತಮ್ಮ ದಂಪತಿಗಳ ಎರಡನೆಯ ಮಗನಾಗಿ ರಾಧಾಕೃಷ್ಣನ್ ಜನಿಸಿದರು. ಇವರ ಮೂಲ ಸ್ಥಳ ನೆಲ್ಲೂರು ಜಿಲ್ಲೆಯ ಸರ್ವಪಲ್ಲಿ ಗ್ರಾಮ. ಸರ್ವಪಲ್ಲಿ ಎಂಬುದು ಇವರ ಮನೆತನದ ಹೆಸರು.

ರಾಧಾಕೃಷ್ಣನ್ ಎತ್ತರದ ವ್ಯಕ್ತಿಯಾಗಿದ್ದರು. ಭಾರತದ ಪರಂಪರೆಯ ಹಿರಿಮೆಗರಿಮೆಗಳನ್ನು ಆಧುನಿಕ ವೈಜ್ಞಾನಿಕ ಪರಿಭಾಷೆಯಲ್ಲಿ ಜಗತ್ತಿಗೆ ವಿಶ್ಲೇಷಿಸಿ ಹೇಳಿದರು. ಪೌರ್ವಾತ್ಯ ತತ್ವಜ್ಞಾನವನ್ನು ಪಾಶ್ಚಾತ್ಯ ಜಗತ್ತಿಗೆ ತಿಳಿಸಿಕೊಟ್ಟವರಲ್ಲಿ ರಾಧಾಕೃಷ್ಣನ್ ಅಗ್ರಗಣ್ಯರು. ಅವರೊಬ್ಬ ಆದರ್ಶ ಗುರುವೂ ಆಗಿದ್ದರು. ಶಿಕ್ಷಣ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಕೊಡುಗೆಯನ್ನು ಗಮನಿಸಿ ಅವರ ಹುಟ್ಟುಹಬ್ಬವನ್ನು ಭಾರತ 'ಶಿಕ್ಷಕರ ದಿನಾಚರಣೆ' ಎಂದು ಆಚರಿಸುತ್ತದೆ.

1910 ರಲ್ಲಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. 20 ವರ್ಷಗಳವರೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿದರು. ಇದೇ ಸಮಯದಲ್ಲಿ ಅವರ ಬರವಣಿಗೆ ಪ್ರಾರಂಭವಾಯಿತು. ಬಹು ಅಮೂಲ್ಯ ಗ್ರಂಥಗಳು ಹೊರಬಂದವು. ಅವರು ಪ್ರಖ್ಯಾತರಾದರು. 1929 ರಲ್ಲಿ ಆಕ್ಸ್‌ಪರ್ಡ್ ವಿಶ್ವವಿದ್ಯಾನಿಲಯದಲ್ಲಿ ತುಲನಾತ್ಮಕ ಧರ್ಮ ಮತ್ತು ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡರು. 1931 ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯದ ಕುಲಪತಿಯಾದರು. 1948ರಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ ಪ್ರಾರಂಭವಾಯಿತು. ರಾಧಾಕೃಷ್ಣನ್‌ರವರು ಅದರ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸಿದರು.

## ಶಿಕ್ಷಣದ ಬಗ್ಗೆ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಅಭಿಪ್ರಾಯ

ಶಿಕ್ಷಣವು ಕೇವಲ ಬೌದ್ಧಿಕ ಶಕ್ತಿಯನ್ನು ವಿಕಸನಗೊಳಿಸಿದರೆ ಸಾಲದು, ಅದು ಮನುಷ್ಯನ ಹೃದಯ ಮತ್ತು ಭಾವನೆಗಳ ಮೇಲೆ ಪ್ರಭಾವ ಬೀರಬೇಕು. ಈ ಪ್ರಭಾವದಿಂದ ವಿದ್ಯಾರ್ಥಿಗಳಲ್ಲಿ ದಯೆ ಮತ್ತು ಅನುಕಂಪ ಎಂಬ ಭಾವನೆಗಳು ಹುಟ್ಟಿಕೊಳ್ಳುತ್ತವೆ. ಮಾನವ ಕಲ್ಯಾಣವೇ ಶಿಕ್ಷಣದ ಮೊದಲ ಗುರಿಯಾಗಬೇಕು.

ಕುತೂಹಲ, ತನಿಖಾ ಮನೋಭಾವ, ಸೃಜನಶೀಲತೆ ಮುಂತಾದ ವಿಚಾರಣಾ ಗುಣವನ್ನು ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಬೆಳೆಸುವಂತಿರಬೇಕು. ಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ ಕಲ್ಪನಾಶಕ್ತಿ, ಕರಕುಶಲತೆ ಬೆಳೆಯಬೇಕು. ತಂತ್ರಜ್ಞಾನ ಮತ್ತು ವಿಜ್ಞಾನದ ಅಭ್ಯಾಸಕ್ಕೆ ವಿದ್ಯಾರ್ಥಿಗಳು ತಮ್ಮನ್ನು ತಾವು ಅರ್ಪಿಸುವುದನ್ನು ಹೇಳಿಕೊಡುವಂತಿರಬೇಕು ಶಿಕ್ಷಣ.

ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವ ತರಬೇತಿಯನ್ನು ಶಿಕ್ಷಣವು ನಮಗೆ ಕೊಡಬೇಕು. ಅವಸರದ ನಿರ್ಣಯಗಳಿಂದ ನಾವು ತಪ್ಪು ದಾರಿ ತುಳಿಯಬಾರದು. ಎಲ್ಲವನ್ನು ಕೂಲಂಕಷವಾಗಿ ವಿಚಾರಿಸಬೇಕು. ಇದಕ್ಕೆಲ್ಲಾ ತಾಳ್ಮೆ ಅವಶ್ಯ. ಸ್ವಯಂ ನಿಯಂತ್ರಣ ಅವಶ್ಯ. ಅಂತಹ ಸ್ವಯಂ ನಿಯಂತ್ರಣವನ್ನು ಜನರಲ್ಲಿ ತುಂಬುವುದೇ ಶಿಕ್ಷಣದ ಒಂದು ಪ್ರಮುಖ ಗುರಿಯಾಗಬೇಕು.

ಹೊಸ ವಿಚಾರಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಉದಾರ ಗುಣವನ್ನು ಯುವ ವಿದ್ಯಾರ್ಥಿಗಳಲ್ಲಿ ಬೆಳೆಸುವುದು ಶಿಕ್ಷಣದ ಮುಖ್ಯ ಗುರಿಯಾಗಬೇಕು.

## ಆದರ್ಶ ಶಿಕ್ಷಕರಾಗಿ ಡಾ|| ಎಸ್ ರಾಧಾಕೃಷ್ಣನ್

ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ ಅವರು ಏರು ಜವ್ವನದ ಯುವಕರಂತೆ ಹಾಸ್ಯ, ವಿನೋದಗಳಲ್ಲಿ ತೊಡಗುತ್ತಿದ್ದರು. ಶಿಕ್ಷಕನೊಬ್ಬನ ಗೌರವವು ಬೋಧನೆಯಿಂದಲೇ ವೃದ್ಧಿಸುತ್ತದೆ, ಜೊತೆಗೆ ವ್ಯಕ್ತಿತ್ವದ ಸೌಜನ್ಯ, ಸ್ನೇಹಶೀಲತೆ ಎಲ್ಲರ ಗಮನವನ್ನು ಸೆಳೆಯುತ್ತದೆ.

ಅವರು ಕೋಲ್ಕೋತ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ ಮೈಸೂರಿನಿಂದ ಹೊರಟ ದಿನ ಅವರಿಗೆ ಕೊಟ್ಟಂತಹ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ಅಂದಿನ ವಾತಾವರಣದಲ್ಲಿದ್ದುದು ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರುಪ್ರೇಮ. ವಿದ್ಯಾರ್ಥಿಗಳೆಲ್ಲರಲ್ಲೂ ಭಕ್ತಿ ಪ್ರೇಮದ ಚಿಲುಮೆ ಉಕ್ಕಿಬಂತು. ರಾಧಾಕೃಷ್ಣನ್ ಅವರನ್ನು ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟಲಿಲ್ಲ. ಸ್ವತಃ ವಿದ್ಯಾರ್ಥಿಗಳೇ ಎಳೆದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ

ಪುಟ 9 ಕ್ಕೆ ➤

ಸಂಘದ ವಾರ್ತೆ

# ವಿವಿಧೆಡೆಗಳಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ

## ಬಳ್ಳಾರಿ

ಹಿಂದಿನ ಕಾಲದಲ್ಲಿ ಋಷಿ ಮುನಿಗಳ ಆಶ್ರಮಗಳೇ ವಿದ್ಯಾಕೇಂದ್ರಗಳಾಗಿರುತ್ತಿದ್ದವು. ಅಲ್ಲಿನ ಋಷಿಮುನಿಗಳು ವಿದ್ಯೆಯ ಜೊತೆಗೆ ನಮ್ಮ ಸಂಸ್ಕೃತಿಯ ಪರಂಪರೆಯನ್ನು ಕಲಿಸುತ್ತಿದ್ದರು. ಅವರ ನಡೆನುಡಿ ಆಚಾರ ವಿಚಾರಗಳು ವಿದ್ಯಾರ್ಥಿಗಳ ಮೇಲೆ ತುಂಬಾ ಪರಿಣಾಮ ಬೀರುತ್ತಿದ್ದವು. ವಿದ್ಯೆ ಕಲಿತ ನಂತರ ಗುರುಗಳಿಗೆ 'ಗುರು ಕಾಣಿಕೆ' ಸಲ್ಲಿಸುವ ಸಂಪ್ರದಾಯವೂ ಆಗಿನ ಕಾಲದಲ್ಲಿತ್ತು.

ಗುರು ದ್ರೋಣಾ ಚಾರ್ಯರಿಗೆ ಏಕಲವ್ಯ ತನ್ನ ಹೆಬ್ಬೆರಳನ್ನೇ ಗುರುದಕ್ಷಿಣೆಯಾಗಿ ನೀಡಿದ ದಿನವೂ ಕೂಡ ಗುರು ಪೌರ್ಣಿಮೆ ದಿನವಾಗಿದೆ. ಬೃಹಸ್ಪತಿ, ದೇವತೆಗಳಿಗೆ ಗುರುವಾಗಿದ್ದರೆ ಶುಕ್ರಾಚಾರ್ಯ ರಾಕ್ಷಸರಿಗೆ ಗುರುವಾಗಿದ್ದ. ಶ್ರೀ ಕೃಷ್ಣ ದೈವ ಸ್ವರೂಪಿಯಾಗಿದ್ದರೂ ಆತನಿಗೂ ಕೂಡ ಬಾಲ್ಯದಲ್ಲಿ ಸಾಂದಿಪನಿ ಋಷಿ ಗುರುವಾಗಿದ್ದ. ರಾಮಲಕ್ಷ್ಮಣರಿಗೆ ವಸಿಷ್ಠ ಮುನಿಗಳು ಗುರುವಾಗಿದ್ದರು. ಅನೇಕ ಸಾಮ್ರಾಜ್ಯ ಸ್ಥಾಪನೆಗೆ ಋಷಿ ಮುನಿಗಳು ಗುರುವಾಗಿದ್ದರು. ಗುರುಶಿಷ್ಯ ಸಂಬಂಧದಲ್ಲಿ ಜಾತಿಯ ಸಾಮರಸ್ಯಕ್ಕೂ ಉದಾಹರಣೆ ನೀಡುವುದಾದರೆ ಶಿಶುನಾಳ ಷರೀಫನಿಗೆ ಕಳಸದ ಗೋವಿಂದ ಭಟ್ಟರು ಗುರುಗಳಾಗಿದ್ದರು ಎಂದು ಉಪನ್ಯಾಸಕ ಡಾ॥ ಎಸ್ ಎಸ್ ವೇಣುಗೋಪಾಲ್ ತಮ್ಮ ಉಪನ್ಯಾಸ ಮಾಲಿಕೆಯಲ್ಲಿ ಗುರುಪರಂಪರೆಯ ಅರ್ಥ, ವ್ಯಾಪ್ತಿಯನ್ನು ಸವಿಸ್ತಾರವಾಗಿ ವಿವರಿಸಿದರು. ಅವರು ಬಳ್ಳಾರಿ ನಗರದ ಕಿತ್ತೂರು ರಾಣಿ ಚೆನ್ನಮ್ಮ ಪ್ರೌಢ ಶಾಲೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ತಾಲ್ಲೂಕು ಘಟಕದಿಂದ 30.7.2015 ಗುರುಪೌರ್ಣಿಮೆ ಅಂಗವಾಗಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾಧ್ಯಕ್ಷ ಎ ಗುಂಡಾಚಾರ್ 'ಹಿಂದೊಬ್ಬ ಗುರುವಿದ್ದ ಮುಂದೊಂದು ಗುರಿಯಿತ್ತು. ಸಾಗುತ್ತಿತ್ತು ಸಾಗುತ್ತಿತ್ತು ಹುಲಿಗಳ ದಂಡು. ಈಗ ಹಿಂದೊಬ್ಬ ಗುರುವಿಲ್ಲ ಮುಂದೊಂದು ಗುರಿಯಿಲ್ಲ ಸಾಗುತ್ತಿದೆ ಸಾಗುತ್ತಿದೆ ಕುರಿಗಳ ಹಿಂಡು' ಎಂಬ ಕವಿವಾಣಿಯನ್ನು ಉದಾಹರಿಸಿದರಲ್ಲದೇ ಜಗತ್ತಿನ ಎಲ್ಲಾ ನಾಗರೀಕತೆಗಳಲ್ಲಿ ಸಿಂಧೂ ಬಯಲಿನ ನಾಗರಿಕತೆ ಜೀವಂತಿಕೆ ಯನ್ನು ಪಡೆದಿದೆ. ಗುರುಪರಂಪರೆ ಆಳವಾಗಿ ನೆಲೆಯೂರಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಖ್ಯಗುರುಗಳಾದ ಶ್ರೀಮತಿ. ಎ. ಕುಮುದಿನಿ ನಮ್ಮ ದೇಶದ ಸಂಸ್ಕೃತಿ ಉನ್ನತ ವಾಗಬೇಕಾದರೆ ಉತ್ತಮ ಶಿಕ್ಷಣದ ಅವಶ್ಯಕತೆ ಇದೆ. ಅಂತಹ ಶಿಕ್ಷಣ ನೀಡುವ ಗುರುಗಳಿಗೆ ಗೌರವ ತೋರಿಸುವ ಪರಂಪರೆ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿನಿಯರಿಗೆ ಕರೆನೀಡಿದರು. ತಾಲೂಕು ಘಟಕದ ಅಧ್ಯಕ್ಷ ಯು.ರಮೇಶ್ ಕಾರ್ಯಕ್ರಮವನ್ನು ನಿರ್ವಹಿಸಿದರು.

**ವರದಿ: ಯು. ರಮೇಶ್**

## ಜಾತಿ ಧರ್ಮಗಳಿಗೆ ಜೋತು ಬೀಳದಿರಿ ಡಾ॥ ಬಿ.ಜೆ.ವಿ ವಸಂತಕುಮಾರ್ ಕರೆ

ಮೈಸೂರಿನ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ 2.8.15 ಭಾನುವಾರ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮಹಾರಾಣಿ ಪದವಿ ಕಲಾ ಕಾಲೇಜಿನ ಸಹ ಪ್ರಾಧ್ಯಾಪಕ ಡಾ॥ ಬಿ.ಜೆ.ವಿ ವಸಂತ ಕುಮಾರ್ ಅವರು ಮಾತನಾಡಿ ಗುರುವಿನ ಸ್ಥಾನದಲ್ಲಿರುವವರು ಯಾವುದೇ ಜಾತಿ, ಧರ್ಮಗಳಿಗೆ ಜೋತುಬೀಳದೆ ಎಲ್ಲ ವಿದ್ಯಾರ್ಥಿಗಳನ್ನು ಸಮಾನರಾಗಿ ಕಾಣುವುದು ಮುಖ್ಯ ಎಂದು ತಿಳಿಸಿದರು.

ಸಮಾಜಕ್ಕೆ ಉತ್ತಮ ಗುರುವಿನ ಅವಶ್ಯಕತೆಯಿದ್ದು, ಗುರುವಿನ ಸ್ಥಾನದಲ್ಲಿರುವವರು ತಮ್ಮ ಸ್ಥಾನಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು. ಅಧ್ಯಾಪಕರು ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡರೆ ಉತ್ತಮ ವಿದ್ಯಾರ್ಥಿಗಳನ್ನು ಹುಟ್ಟು ಹಾಕಬಹುದು ಎಂದು ಸಲಹೆ ನೀಡಿದರು.

ಅಧ್ಯಾಪಕರಾದವರು ಕೇವಲ ಸಂಬಳ ಬಂದಾಗ ಮುಗಳ್ನಗೆ ಬೀರಿದರೆ ಸಾಲದು. ವಿದ್ಯಾರ್ಥಿಯ ಕಲಿಕೆಯ ಕಡೆಗೆ ಗಮನ ಹರಿಸಬೇಕು ಎಂದು ಹೇಳಿದರು.

ಇಂದು ವಿಶ್ವವಿದ್ಯಾನಿಲಯಗಳಲ್ಲಿ ಸ್ವಜಾತಿ ಅಧ್ಯಾಪಕರ ಸಂಘಗಳು ಹೆಚ್ಚಾಗಿ ಸ್ಥಾಪನೆಗೊಳ್ಳುತ್ತಿವೆ. ಇದರಿಂದ ಗುಂಪುಗಾರಿಕೆಗೆ ಅವಕಾಶ ಮಾಡಿಕೊಟ್ಟಂತಾಗಿ ವಿದ್ಯಾರ್ಥಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ಎಸ್. ನಂದೀಶ್ ಅಧ್ಯಕ್ಷತೆ ವಹಿಸಿದ್ದರು. ಕುಂದೂರು ಮಠದ ಡಾ॥ ಶರತ್‌ಚಂದ್ರ ಸ್ವಾಮಿ ಗುರುವಂದನೆ ಸ್ವೀಕರಿಸಿದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಾನಂದ್ ಸಿಂಧನಕೇರಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿ ನಂಜುಡಸ್ವಾಮಿ. ಉದಯರವಿಪ್ರಕಾಶ್ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

**ವರದಿ: ಉದಯ ರವಿ ಪ್ರಕಾಶ್**

➤ ಪುಟ 6 ರಿಂದ..... ಗುರುವಂದನಾ...

## ಗದಗ ಜಿಲ್ಲೆ

ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕರ ಸಂಘ ಜಿಲ್ಲಾ ಘಟಕ ಗದಗ ಆಶ್ರಯದಲ್ಲಿ ಸಂಘದ ಜಿಲ್ಲಾ ಅಧ್ಯಕ್ಷರಾದ ಶ್ರೀ ಎನ್.ವಿ ಪಾಟೀಲ್ ಶಿಕ್ಷಕರ ಮನೆಯ ಮೇಲಿನ ವೇದಿಕೆಯಲ್ಲಿ ಗುರುಪೂರ್ಣಿಮೆ ನಿಮಿತ್ತ ಗುರುವಂದನಾ ಕಾರ್ಯಕ್ರಮವನ್ನು ದಿನಾಂಕ: 4–8–2015 ರಂದು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವು ಶ್ರೀ ಸಿ.ಆರ್ ಹಿರೇಮಠ ಶಿಕ್ಷಕರು ಸ್ವಾಗತ ಮತ್ತು ಪರಿಚಯದೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮ ದಲ್ಲಿ ಮುಖ್ಯ ಅತಿಥಿಗಳಾಗಿ ಪದವೀಧರ ಮತದಾರರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್ ವಿ ಸಂಕನೂರು ಗುರುಗಳು ಆಗಮಿಸಿದ್ದರು. ಹಾಗೂ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಸ್ಥಳೀಯ ಕೆ.ವಿ.ಎಸ್.ಆರ್. ಪ. ಪೂ. ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರಾದ ಶ್ರೀ ಪಿ ಎಸ್ ಕಾಶಪ್ಪನವರ್, ಗುರುಗಳು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಸ್ಥಳೀಯ ವಿದ್ಯಾವರ್ಧಕ ಸಂಸ್ಥೆಯ ಶ್ರೀ ಸಿ ಎನ್ ಪಾಟೀಲ ಪ್ರೌಢಶಾಲೆಯ ಶಿಕ್ಷಕರು, ಇವರು ವಹಿಸಿದ್ದರು.

ಸನ್ಮಾನಿತರಾದ ಶ್ರೀ ಪಿ.ಎಸ್. ಕಾಶಪ್ಪನವರು ಮಾತನಾಡುತ್ತ ಗುರುಗಳ ಸ್ಥಾನಮಾನದ ಮಹತ್ವ ಕುರಿತು ವಿವರಿಸಿದರು. ಶ್ರೀ ಎಸ್.ವಿ. ಸಂಕನೂರ ಮಾತನಾಡುತ್ತಾ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘವು ಇದೇ ರೀತಿ ಅನೇಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಅನುಕೂಲವಾಗುವಂತೆ ವರ್ಷದುದ್ದಕ್ಕೂ ಹಮಿಕೊಳ್ಳಬೇಕು. ಅದಕ್ಕೆ ನನ್ನ ಸಹಾಯ, ಸಹಕಾರ ಎಂದಿಗೂ ಇರುತ್ತದೆ ಎಂದು ಅಭಯ ನೀಡಿದರು.

ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ ಶ್ರೀ ಎನ್.ವಿ ಪಾಟೀಲ್ ಗುರುವಿನ ಸ್ಥಾನದ ಮಹತ್ವ ನೆನಪಿಸುತ್ತ ಕಲಿಸಿದ ಗುರುಗಳ ಸ್ಮರಣೆ ಮಾಡುತ್ತಾ ಸಮುದಾಯಕ್ಕೆ ಯಾವುದೇ ತೊಂದರೆಗಳು ಬಂದಲ್ಲಿ ನಮ್ಮ ನಾಯಕರ ಮುಖಾಂತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣ ಎಂದು ಹೇಳಿದರು. ಕಾರ್ಯಕ್ರಮವು ಶ್ರೀ ಡಿ.ಎಸ್ ಅಂಗಡಿ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು. ಕಾರ್ಯಕ್ರಮದಲ್ಲಿ ಶ್ರೀ ಟಿ. ಎಸ್. ಬಂಡಿಹಳ, ಎನ್ ಎಸ್. ಹಂಜಗಿ, ಎಂ. ಆರ್. ಲಮಾಣಿ, ಎಸ್.ಎಂ ಹಳೇಮನಿ, ಎಂ.ಬಿ. ಹೋಳಿ, ಬಿ.ಎಂ. ಮಾನೇದ, ಎಸ್.ಬಿ ಕಿತ್ತೂರ, ಎಸ್.ಎನ್ ಗೌಡರ. ಬಿ ಎನ್ ಸಜ್ಜನ, ಜಿ.ವಿ ಹಿರೇಮಠ ಎನ್ ವಿ ಜೋಷಿ, ಪ್ರೊ॥ ಅಂಗಡಿ, ಶ್ರೀ ಮಟ್ಟಿ, ಡಿ.ಎಸ್ ಹೂಗಾರ, ಪಿ.ಬಿ ಹುಣಸೀಮರದ ಅನೇಕ ಜನ ಶಿಕ್ಷಕರು ಉಪಸ್ಥಿತರಿದ್ದರು.

**ವರದಿ : ಎನ್ ವಿ ಪಾಟೀಲ್**

## "ಜಗತ್ತಿನಲ್ಲಿಯೇ ಗುರುವಿಗೆ ಗೌರವ ನೀಡುವ ಏಕೈಕ ದೇಶ ಭಾರತ"

ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಕಲಬುರ್ಗಿ ದಿ: 6–8–15 ರಂದು ನಗರದ ಗುರುಕುಲ ಪದವಿಪೂರ್ವ ಕಾಲೇಜಿನಲ್ಲಿ 'ಗುರುವಂದನಾ ಕಾರ್ಯಕ್ರಮ' ಆಯೋಜಿಸಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆರ್ಶೀವಚನ ನೀಡಿದ ಬೀದರನ ಚಿದಂಬರಾಶ್ರಮದ ಪ.ಪೂ.ಶ್ರೀ ಶಿವಕುಮಾರ ಮಾಹಸ್ವಾಮೀಜಿ ಯವರು ಮಾತನಾಡಿ, ಸುಂಸ್ಕೃತ ಜನರು ಇರುವ ಭಾರತ ದೇಶ ಗುರು ಗೌರವ ದೇಶ. ಗುರುವನ್ನು ಪರಮಾತ್ಮ ಎಂದು ಸಂಭೋದಿಸುವ ರಾಷ್ಟ್ರ ಸಾವಿರಾರು ವರ್ಷಗಳ ಇತಿಹಾಸ ಇರುವ ಭಾರತ ದೇಶದಲ್ಲಿ ಗುರು ಪರಂಪರೆ ಪುರಾತನ ಕಾಲದಿಂದಲೂ ಇದೆ. ದೇವ ದೇವತೆಗಳಿಗೂ ಗುರುಗಳ ಮಾರ್ಗದರ್ಶನವಿದೆ. ಶ್ರೀ ರಾಮನಿಗೆ ವಶಿಷ್ಠರು, ಶ್ರೀಕೃಷ್ಣನಿಗೆ ಸಾಂದಿಪಿನಿ ಗರುಗಳಿದ್ದರು, ಅದಕ್ಕಾಗಿಯೇ ನಮ್ಮಲ್ಲಿ ಮುಂದೆ ಗುರಿ, ಹಿಂದೆ ಗುರು ಎಂಬ ಉಕ್ತಿ ಈಗಲೂ ಚಾಲ್ತಿಯಲ್ಲಿದೆ. ಗುರುಗಳಿಗೆ ಇದ್ದಷ್ಟು ಗೌರವ ಮನ್ನಣೆ ಜಗತ್ತಿನ ಯಾವ ದೇಶದಲ್ಲೂ ಇಲ್ಲ ಎಂದರು.

ತಾಯಿ ಮನೆಯಲ್ಲಿ ನೀಡುವ ಶಿಕ್ಷಣ ಮೊದಲ ಪಾಠಶಾಲೆಯಾದರೆ, ಶಾಲೆಯಲ್ಲಿ ಶಿಕ್ಷಕರು ಮಕ್ಕಳನ್ನು ಮೂರ್ತಿಯನ್ನಾಗಿಮಾಡಿ ಅವರ ಉತ್ತಮ ಭವಿಷ್ಯ ನಿರ್ಮಾಣ ಮಾಡುವ ಪವಿತ್ರ ಕೆಲಸ ಮಾಡುತ್ತಾರೆ. ಪರಿಶುದ್ಧವಾದ ಸೇವೆ ಅಂತ ಉಳಿದಿದ್ದರೆ ಅದು ಶಿಕ್ಷಕರ ಸೇವೆ ಒಂದೇ ಎಂದರು

ಶಿಕ್ಷಕರಾದವರು ಮಕ್ಕಳಿಗೆ ಪಠ್ಯದ ಜೊತೆಗೆ ಮಾನವೀಯ ಗುಣಗಳು, ಉತ್ತಮ ಸಂಸ್ಕಾರ, ವಿಶ್ವಾಸ, ನಿರ್ದಿಷ್ಟ ಗುರಿ ಮತ್ತು ಬದ್ಧತೆ ಕಲಿಸಬೇಕೆಂದರು. ವಿಧ್ಯಾರ್ಥಿಗಳು ಸಹ ಗುರುಗಳಿಗೆ ಅಪಾರ ಗೌರವದಿಂದ ಕಾಣಬೇಕು, ವಿದ್ಯಾರ್ಥಿ ಜೀವನ ಅಮೂಲ್ಯವಾಗಿದ್ದು, ಅದನ್ನು ಹಾನಿ ಮಾಡಿಕೊಳ್ಳಬಾರದೆಂದು ಶ್ರೀಗಳು ನುಡಿದರು.

ಮುಖ್ಯ ಅತಿಥಿಗಳಾಗಿದ್ದ ವಿದ್ಯಾಭಾರತಿ ದಕ್ಷಿಣ ಮಧ್ಯ ಕ್ಷೇತ್ರೀಯ ಅಧ್ಯಕ್ಷ ಶ್ರೀ ಶಿವಯ್ಯ ಮಠಪತಿ ಮಾತಾನಾಡಿ, ಭಾರತದಲ್ಲಿ ವಿಜ್ಞಾನ ಸಂಶೋಧಕರಾಗಲು ಉತ್ತಮ ಅವಕಾಶವಿದೆ, ವಿದ್ಯಾರ್ಥಿಗಳು ಆ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದರು.

ಸಂಘದ ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲ ಮಾತಾನಾಡಿ ಸಂಘದ ಉಗಮ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಅಲ್ಲದೇ ಉಗ್ರರ ವಶದಲ್ಲಿದ್ದ ರಾಜ್ಯದ ಇಬ್ಬರು ಶಿಕ್ಷಕರು ಎಂದ ಮಾತ್ರಕ್ಕೆ ಬಿಡುಗಡೆ ಗೊಂಡಿದ್ದಾರೆ ಎಂದರೆ ಗುರುವಿನ ಸ್ಥಾನದಲ್ಲಿ ಎಂಥಹ ಸಾಮರ್ಥ್ಯವಿದೆ ಎಂದು ತಿಳಿಸಿ, ಜಗತ್ತನ್ನೇ ಗೆಲ್ಲುವ ಶಕ್ತಿ ಗುರುವಿನಲ್ಲಿದೆ ಎಂಬುವುದಕ್ಕೆ ಇವರೇ ಸಾಕ್ಷಿ. ಶಿಕ್ಷಕರು ಎಂದರೆ ಕೀಳರಿಮೆ ಬೇಡ ಎಂದರು.

ಜಾಜಿ ಶಿಕ್ಷಣ ಸಂಸ್ಥೆಯ ಆಧ್ಯಕ್ಷ ಶ್ರೀ ವಿಜಯಕುಮಾರ

ಪುಟ 8 ಕ್ಕೆ ➤

➤ ಪುಟ 7 ರಿಂದ..... ಗುರುವಂದನಾ...

ಜಾಜಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಪ್ರಲ್ಹಾದ್ ಬುರ್ಲಿ ವಿಶ್ವನಾಥ ಪಾಟೀಲ, ಸಂಘದ ಜಿಲ್ಲಾ ಅಧ್ಯಕ್ಷ ಶ್ರೀ ಚಂದ್ರಶೇಖರ್ ಎಸ್. ಪಾಟೀಲ್ ಶಿಕ್ಷಣ ಪ್ರಕೋಷ್ಠದ ಪ್ರಮುಖ ಶ್ರೀ ಐ. ಕೆ. ಪಾಟೀಲ ಉಪನ್ಯಾಸಕರು ವಿವಿಧ ತಾಲೂಕಗಳ ಶಿಕ್ಷಕರುಗಳು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದರು.

**ವರದಿ : ಶ್ರೀಚಂದ್ರಶೇಖರ ಎಸ್. ಪಾಟೀಲ**
**ಅಧ್ಯಕ್ಷರು, ಜಿಲ್ಲಾ ಘಟಕ ಕಲಬುರ್ಗಿ**

## ಭಾರತ – ಜಗತ್ತಿಗೇ ಗುರು

ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಕರ್ನಾಟಕದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ತಿಪ್ಪೇಸ್ವಾಮಿಯವರು ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಭಾರತ ಜಗತ್ತಿಗೇ ಗುರು. ಇದು ದೇವ ಭೂಮಿ. ಗಣಿತ, ವಿಜ್ಞಾನ, ಸಾಹಿತ್ಯ, ಆಯುರ್ವೇದ, ಯೋಗ ಮುಂತಾದವುಗಳನ್ನು ಜಗತ್ತಿಗೆ ಕಲಿಸಿಕೊಟ್ಟಿದೆ ಎಂದು ತಿಳಿಸಿದರು. ಅವರು ವೇದವ್ಯಾಸರನ್ನು ಸ್ಮರಿಸುತ್ತಾ ನಮ್ಮ ಗುರುಪರಂಪರೆಯ ಶ್ರೇಷ್ಠತೆಯ ಬಗ್ಗೆ ತಿಳಿಸಿದರು. ಕಬೀರರು ತಮ್ಮ ದೋಹೆಯಲ್ಲಿ ಗುರು ಮತ್ತು ಗೋವಿಂದ ಒಟ್ಟಿಗೆ ಬಂದಾಗ ಮೊದಲು ಗುರುವಿಗೆ, ನಂತರ ದೇವರಿಗೆ ಪ್ರಣಾಮಗಳನ್ನು ಸಲ್ಲಿಸಬೇಕು ಎಂದು ಹೇಳಿದ್ದಾರೆ. ದ್ರೋಣ– ಅರ್ಜುನ, ರಾಮಕೃಷ್ಣ ಪರಮ ಹಂಸರು– ವಿವೇಕಾನಂದರು ಮುಂತಾದ ಗುರುಶಿಷ್ಯರ ಬಗ್ಗೆ ತಿಳಿಸಿದರು. ಸಮರ್ಥ ರಾಮದಾಸರು, ವಿದ್ಯಾರಣ್ಯರು, ಶಂಕರ– ಮಧ್ವ– ರಾಮಾನುಜಾಚಾರ್ಯರಂತಹ ಗುರುಗಳು ಭಾರತದಲ್ಲಿ ಜನಿಸಿದ್ದಾರೆ. ಭಾರತದ ಸಂಸ್ಕೃತಿ ತ್ಯಾಗ ಮತ್ತು ಸೇವೆ. ಅಧ್ಯಾಪಕರಾದ ನಾವೆಲ್ಲ ಆ ಗುರುವಿನ ಮಹಿಮೆಯನ್ನು ಅರಿತು ಆ ಕೌಶಲಗಳನ್ನು, ಮೌಲ್ಯಗಳನ್ನು ಮೈಗೂಡಿಸಿಕೊಳ್ಳೋಣ ಎಂದು ತಿಳಿಸಿದರು.

ದಿನಾಂಕ 01.08.2015ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಆಚಾರ್ಯ ಪಾಠಶಾಲೆಯಲ್ಲಿ ನಡೆಸಿದ ಗುರುವಂದನಾ ಕಾರ್ಯಕ್ರಮದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಸಹ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಚಿದಾನಂದ ಪಾಟೀಲರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಮಾತನಾಡಿ ಮಾಧ್ಯಮಿಕ ಶಿಕ್ಷಕ ಸಂಘದ ಸಾಧನೆ, ಹೋರಾಟಗಳ ಬಗ್ಗೆ ತಿಳಿಸಿದರು. ಐ.ಸಿ.ಎಸ್ ಉಗ್ರರು ಶಿಕ್ಷಕ ಎಂದು ತಿಳಿದ ಕೂಡಲೇ ಭಾರತೀಯ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ಸಂಗತಿಯನ್ನು ಪ್ರಸ್ತಾಪಿಸಿ ಶಿಕ್ಷಕರಿಗೆ ಈಗಲೂ ಗೌರವವಿದೆ ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ಶ್ರೀ ವಿ.ರಾಜು ಪ್ರಾಸ್ತಾವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು. ಶಿಕ್ಷಣ ಇಲಾಖೆಯ ಪರವಾಗಿ ಶ್ರೀಮತಿ ವಿ.ಸೌಭಾಗ್ಯ ಮಾತನಾಡಿ ಶಿಕ್ಷಕ ಸಂಘದ ಎಲ್ಲಾ ಕಾರ್ಯಕ್ರಮಗಳಿಗೂ ಸಹಕಾರ ನೀಡುವುದಾಗಿ ಹೇಳಿದರು. ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಎ ಸುರೇಂದ್ರರವರು ವಂದನಾರ್ಪಣೆ ಮಾಡಿದರು. ಶ್ರೀಮತಿ ಎಸ್. ಅರುಣ ಕಾರ್ಯಕ್ರಮದ ನಿರೂಪಣೆ ಮಾಡಿದರು.

**ವರದಿ: ವಿ.ರಾಜು**
ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷರು



## ಅಭಿನಂದನೆಗಳು

**ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶೈಕ್ಷಿಕ ಸಂಘಕ್ಕೆ ನೂತನ ರಾಜ್ಯಾಧ್ಯಕ್ಷರಾಗಿ ಡಾ॥ ರಘು ಅಕಮಂಚಿ, ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಪ್ರೊ॥ ಜಿ.ಸಿ. ರಾಜಣ್ಣರವರನ್ನು ಆಯ್ಕೆಮಾಡಲಾಗಿದ್ದು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಇವರಿಗೆ ಅಭಿನಂದನೆಗಳನ್ನು ತಿಳಿಸುತ್ತದೆ.**



## ಶ್ರದ್ಧಾಂಜಲಿ

ಆರ್. ಎಸ್. ಎಸ್. ನ ಹಿರಿಯ ಸ್ವಯಂಸೇವಕರೂ, ರಾಜ್ಯದ ವಿವಿಧ ಭಾಗಗಳ ಪ್ರಚಾರಕರೂ, ಪ್ರಾಂತ ಬೌದ್ಧಿಕ ಪ್ರಮುಖರೂ, ಕರ್ನಾಟಕ ಪ್ರಾಂತ ಪ್ರಚಾರಕರೂ, ಕ್ಷೇತ್ರೀಯ ಪ್ರಚಾರಕರೂ, ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯರೂ, ಪರಿವಾರ ಪ್ರಬೋಧನ್‌ನ ಅಖಿಲ ಭಾರತೀಯ ಸಂಯೋಜಕರೂ, ಎಲ್ಲಕ್ಕೂ ಮಿಗಿಲಾಗಿ ಹೇಗೆ ಬದುಕಬೇಕೆಂಬುದಕ್ಕೆ ಎಲ್ಲರಿಗೂ ಪ್ರೇರಕರಾಗಿದ್ದ 83 ವರ್ಷದ ಹಿರಿಯರಾದ ನ. ಕೃಷ್ಣಪ್ಪನವರು 10–08–2015 ರಂದು ವಿಧಿವಶರಾದುದು ದುಃಖದಾಯಕ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

➢ ಪುಟ 1 ರಿಂದ..... ಪಂಚಶೀಲಗಳು...

ಏರ್ಪಡಿಸಬೇಕಾಗಿರುವುದಾಗಿ ತಿಳಿಸಿದರು. ವಿಷಯ ಪುನಶ್ಚೇತನ ಕಾರ್ಯಾಗಾರವನ್ನು ಜಿಲ್ಲಾ ಕಾರ್ಯಕ್ರಮವಾಗಿ ಎಲ್ಲಾ ಜಿಲ್ಲೆಗಳೂ ನಡೆಸಬೇಕಾಗುತ್ತದೆ. ರಾಜ್ಯ ಮಟ್ಟದಲ್ಲಿ ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿಯವರ ಜನ್ಮ ದಿನಗಳನ್ನು 'ಮಹಿಳಾ ದಿನಾಚರಣೆ'ಯಾಗಿ 19-11-2015ರಂದು ಆಚರಿಸುವ ಬಗ್ಗೆ ಬೆಂಗಳೂರಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸುವುದಾಗಿ ತಿಳಿಸಿ, ಈ ಕಾರ್ಯಕ್ರಮಕ್ಕೆ ಪ್ರತಿ ಜಿಲ್ಲೆಗಳಿಂದ 5 ಶಿಕ್ಷಕಿಯರು ಭಾಗವಹಿಸುವಂತೆ ತಿಳಿಸಿದರು.

'ಶಿಕ್ಷಕ ಸಮಾಚಾರ' ಶಿಕ್ಷಕ ಸಂಘದ ಮುಖವಾಣಿ. ಸಂಘದಲ್ಲಿ ನಡೆಯುವ ಕಾರ್ಯಕ್ರಮಗಳು ಅದರ ಮೂಲಕ ಎಲ್ಲರಿಗೂ ತಲುಪಬೇಕು. ಆದ್ದರಿಂದ ಜಿಲ್ಲೆ, ತಾಲೂಕುಗಳಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳ ವರದಿಯನ್ನು ಪತ್ರಿಕೆಗೆ ಕಳುಹಿಸುವುದರ ಅಗತ್ಯವನ್ನು ಪತ್ರಿಕೆಯ ಸಂಪಾದಕರಾದ ಎನ್. ನಾಗರಾಜ ಸಭೆಗೆ ತಿಳಿಸಿದರು. ಪ್ರತಿಭಾವಂತ ಶಿಕ್ಷಕ ಕಾರ್ಯಕರ್ತರು ಸಂಘದಲ್ಲಿದ್ದು ಪತ್ರಿಕೆಗೆ ಲೇಖನಗಳನ್ನು ಕಳುಹಿಸುವಂತೆ ವಿನಂತಿಸಿದರು.

ಸಂಘದ ಕಾರ್ಯಾಧ್ಯಕ್ಷರೂ, ಎಂ.ಎಲ್.ಸಿಗಳೂ ಆದ ಶ್ರೀ ಅರುಣ ಶಹಾಪುರ್‌ಅವರು ವಿಧಾನ ಪರಿಷತ್ತಿನಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಗಳ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಿದರು. ಸದನದಲ್ಲಿ ಚರ್ಚಿಸಬೇಕಾದ ವಿಚಾರಗಳ ಬಗ್ಗೆ ಸಲಹೆ ನೀಡುವಂತೆ ಕೋರಿದರು. ನಂತರ ಕಾರ್ಯಕರ್ತರು ಪ್ರಸ್ತಾಪಿಸಿದ ಹೊಸ ವೇತನ ಶ್ರೇಣಿ, ಕುಮಾರ್ ನಾಯಕ್ ವರದಿ, ವೇತನ ತಾರತಮ್ಯ, ಕಾಲ್ಪನಿಕ ವೇತನ, ಪ್ರೌಢಶಾಲೆಯಿಂದ ಪಿ.ಯು. ಕಾಲೇಜಿಗೆ ಉಪನ್ಯಾಸಕರಾಗಿ ಬಡ್ತಿ ಮುಂತಾದ ಪ್ರಮುಖ ವಿಷಯಗಳ ಬಗ್ಗೆ ಸರ್ಕಾರದಲ್ಲಿ ನಡೆದಿರುವ, ಆಗಬೇಕಾದ ಸಂಗತಿಗಳನ್ನು ಸವಿವರವಾಗಿ ಚರ್ಚಿಸಿದರು. ಶಿಕ್ಷಕ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಪ್ರಚಾರ ಕಡಿಮೆಯಾಗಿದ್ದು ಶಿಕ್ಷಕ ಸಮುದಾಯಕ್ಕೆ ಅದರ ತಿಳುವಳಿಕೆ ನೀಡುವ ಅಗತ್ಯತೆಯನ್ನು ಒತ್ತಿ ಹೇಳಿದರು. ಶ್ರೀ ಚಿದಾನಂದ ಪಾಟೀಲರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ●

➢ ಪುಟ 5 ರಿಂದ..... ಡಾ. ರಾಧಾಕೃಷ್ಣನ್....

ಕಂಪಾರ್ಟಮೆಂಟನ್ನು ಒರಗುದಿಂಬು ಹಾಗೂ ರತ್ನಗಂಬಳಿಯನ್ನು ಹಾಸಿ ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ ದೈವ ಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು. "ರಾಧಾಕೃಷ್ಣನ್ ಅವರಿಗೆ ಜಯವಾಗಲಿ" ಎಂಬ ಕೂಗು ರೈಲ್ವೆ ಸ್ಟೇಷನ್ನಿನ ಆವರಣದಲ್ಲೆಲ್ಲಾ ಮೊಳಗುತ್ತಿತ್ತು. ಆ ದಿನ ಭಾವೋದ್ರೇಕದಿಂದ ಅದೆಷ್ಟು ಜನ ಅತ್ತರೋ ! ವಿದ್ಯಾರ್ಥಿಗಳು ತೋರಿದ ವಿಶ್ವಾಸ ಅವರ ಕಣ್ಣಿನಲ್ಲೂ ನೀರು ತಂದಿತು. ಈ ಎಲ್ಲಾ ಸಂಗತಿಗಳನ್ನು ಗಮನಿಸಿದರೆ ಅವರೆಂತಹ ಆದರ್ಶ ಶಿಕ್ಷಕರೆಂದು ಗೊತ್ತಾಗುತ್ತದೆ.

ಶಿಕ್ಷಣದ ಬಗ್ಗೆ ಇಂತಹ ಉನ್ನತ ವಿಚಾರಧಾರೆಯನ್ನು ಹೊಂದಿದ್ದ ಮಹಾನ್ ವ್ಯಕ್ತಿ, ಒಬ್ಬ ಶಿಕ್ಷಕನಾಗಿ ವೃತ್ತಿಯನ್ನು ಆರಂಭಿಸಿ ಅಧ್ಯಯನ, ಅಧ್ಯಾಪನವನ್ನು ನಿರ್ವಂಚನೆಯಿಂದ ಮಾಡುತ್ತಾ ರಾಷ್ಟ್ರಪತಿಯಂತಹ ಉನ್ನತ ಹುದ್ದೆಯನ್ನು ಸಹ ಅಲಂಕರಿಸಿದವರು ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು. ಇಂತಹ ಮಹಾನ್ ವ್ಯಕ್ತಿಯಿಂದ ಶಿಕ್ಷಕ ಕುಲದವರು, ಸಮಾಜದ ಇನ್ನಿತರರು ಕಲಿಯುವಂತಹುದು ಬಹಳಷ್ಟಿದೆ. ಇಂತಹ ವ್ಯಕ್ತಿಯ ಜನ್ಮದಿನವಾದ ಸೆಪ್ಟೆಂಬರ್ 5 ನ್ನು "ರಾಷ್ಟ್ರೀಯ ಶಿಕ್ಷಕ ದಿನಾಚರಣೆ"ಯನ್ನಾಗಿ ಆಚರಿಸುವುದು ನಮ್ಮೆಲ್ಲಾ ಶಿಕ್ಷಕರಿಗೆ ಒಂದು ಹೆಮ್ಮೆಯ ವಿಚಾರವೇ ಸರಿ. ●

➢ ಪುಟ 4 ರಿಂದ..... ರಕ್ಷಾಬಂಧನ...

ರಾಷ್ಟ್ರಪ್ರೇಮ ಉಕ್ಕಿಸುವ ಈ ರಾಷ್ಟ್ರರಥ ಸಂಚಾಲನೆಯಲ್ಲಿ ಪಾಲ್ಗೊಂಡು ಸಮಾಜ ಹಿತಸಾಧನೆಯ ಅಂಗೋಪಾಂಗವೆಂಬ ಹೆಮ್ಮೆ ತಾಳಲಿ ಎಂಬುದೇ ನಿರೀಕ್ಷೆ, ಆಶಯ. ಸಮಾಜವನ್ನು ಸ್ನೇಹ, ಪ್ರೇಮ, ಬಂಧುತ್ವಗಳಾಧಾರದ ಮೇಲೆ ನಿರ್ಮಿಸುವ ಪ್ರತೀಕ ಶಕ್ತಿ ರಕ್ಷಾಬಂಧನ ಉತ್ಸವಗಳ ಆಚರಣೆಗೆ ಎಲ್ಲ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಸಂಸ್ಥೆ, ಸಂಘಟನೆಗಳೂ, ಮಠಮಂದಿರ, ಕಾರ್ಖಾನೆ, ಉದ್ಯೋಗ ಕ್ಷೇತ್ರಗಳೂ ಶಕ್ತಿಮೀರಿ ಯೋಗದಾನ ನೀಡಿ, ಐಕ್ಯ ಮತ್ತು ಬಂಧುತ್ವ ಸ್ಥಾಪನೆಯ ತೆರೆಗಳು ಬೃಹದಾಕಾರ ತಾಳುವಂತೆ ಕೈ ಜೋಡಿಸಲಿ ಎಂಬುದೇ ವಿನಂತಿ.

ಯಾವುದೇ ಪತ್ರಿಕೆ, ಯಾವುದೇ ಸಂವಾದವಿರಲಿ, ಅಲ್ಲಿ ಮುಖ್ಯವಾಗಿ ಇಂದು ಪ್ರಸ್ತಾಪಕ್ಕೆ ಬರುವುದು ಭ್ರಷ್ಟಾಚಾರ, ಜಾತಿದ್ವೇಷ ಮುಂತಾಗಿ ಸಮಾಜವನ್ನು ಕಾಡುತ್ತಿರುವ ದುಷ್ಟ ಸಂಗತಿಗಳೇ. ಇದು ದೂರವಾಗಬೇಕು ಎಂದು ಆಶಿಸದಿರುವ ವ್ಯಕ್ತಿ, ಸಂಸ್ಥೆಗಳು ಅಪರೂಪವೇ. ಆದರೂ ಸರ್ವ ಜನಾದರಣೀಯ ಆಚರಣೆಗಳಿಗೆ ಎಲ್ಲಿಲ್ಲದ ಅಪಸವ್ಯ. ಉಚ್ಚ ಅಧಿಕಾರಿಗಳೂ ಲಂಚಕೋರರೇ. ಈ ಪರಿಸ್ಥಿತಿ ಸುಧಾರಣೆ ಹೇಗೆ?

ಸಮಾಜದಲ್ಲಿಂದು ಸಜ್ಜನರಿಗೆ ಕೊರತೆಯಿಲ್ಲ. ಆದರೆ ಅವರು ನಿಷ್ಕ್ರಿಯರು. ಸತ್ಯವನ್ನು ಘೋಷಿಸಿ ಹೇಳುವ ಎದೆಗಾರಿಕೆಯೇ ಕಂಡುಬಾರದು. ರಕ್ಷಾಬಂಧನ ಉತ್ಸವವು ಇಂತಹ ಸಜ್ಜನ ವೃಂದಕ್ಕೆ ಕರ್ತವ್ಯ ಪಥದ ದಿಕ್ಕು ತೋರಲಿ; ಅನ್ಯಾಯ, ಅಸತ್ಯಗಳಿಗೆ ನಮ್ಮ ಬೆಂಬಲವಿಲ್ಲ ಎಂದು ಮನಸಾ, ಕಾಯಾ, ವಾಚಾ ಘೋಷಿಸಲು ಧರಿಸಿದ ಆ ರಕ್ಷೆಯು ನಿರ್ಧಾರದ ಸಂಕೇತವಾಗಲಿ.

**ಆಳವಾಗಿ ಮನಸ್ಸಿನಲ್ಲಿ ಚಿಂತಿಸಿ ನೋಡು – ಗೋವಿಂದನಿಗಿಂತಲೂ ಗುರುವೇ ಶ್ರೇಷ್ಠನು. ಏಕೆಂದರೆ, ದೇವರ ಸೃಷ್ಟಿಯಲ್ಲಿ ಪುನರ್ ಜನ್ಮವಿದೆ ; ಆದರೆ ಗುರುವಿನ ಕೃಪೆ ಅದನ್ನು ದಾಟಿಸುವುದು.**

**'ನಾರಿ ನರಕಕ್ಕೆ ದಾರಿ ಎನ್ನಬೇಡ'. ಆಕೆ ಸಂತರಿಗೆ ಜನ್ಮ ಕೊಟ್ಟವಳು. ಭಕ್ತರನ್ನು ಹಡೆಯುವ ಆಕೆ ರತ್ನಗಳ ಗಣಿಯಾಗಿರುವಳು.**

**– ಕಬೀರರು**

# ಅನುದಾನಿತ ಶಾಲೆಗಳ ಶಿಕ್ಷಕ ಬಂಧುಗಳ ಜೊತೆ ಮಾಧ್ಯಮಿಕ ಶಿಕ್ಷಕ ಸಂಘ




ದಿನಾಂಕ: 20.7.15 ರ ಸೋಮವಾರ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಹಾಗೂ ರಾಜ್ಯಸರ್ಕಾರದ ಮಲತಾಯಿ ಧೋರಣೆ ಖಂಡಿಸಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕ ಬಂಧುಗಳು ಬೆಂಗಳೂರಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದರು. ಸದಾ ಶಿಕ್ಷಕರ ಹಾಗೂ ಶಿಕ್ಷಣದ ಅಭ್ಯುದಯಕ್ಕೆ ಶ್ರಮಿಸುತ್ತಿರುವ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಮಾನ್ಯ ಶ್ರೀ ಅರುಣ್ ಶಹಾಪುರ, ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ವೈ. ಎ. ನಾರಾಯಣ ಸ್ವಾಮಿ ಶ್ರೀ ಬಸವರಾಜ್ ಹೊರಟ್ಟಿ, ಶ್ರೀ ಮರಿತಿಬ್ಬೇಗೌಡ, ಶ್ರೀ ಗೋ. ಮದುಸೂದನ್, ಶ್ರೀ ವಿ. ಸಂಕನೂರು, ಶ್ರೀ ಚೌಡರೆಡ್ಡಿ ಮುಂತಾದ ವಿಧಾನ ಪರಿಷತ್ ಸದಸ್ಯರೊಡಗೂಡಿ ಬೆಂಗಳೂರು ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಸಚಿವರಿಗೆ ಮನವಿ ಅರ್ಪಿಸಲಾಯಿತು. ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಸಾವಿರಾರು ಶಿಕ್ಷಕ ಬಂಧುಗಳು 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದನ್ನು ಸಾಬೀತು ಪಡಿಸಿದರು. ನಮ್ಮ ಮಾನ್ಯ ಶಿಕ್ಷಣ ಮಂತ್ರಿಗಳು ಸ್ವತಃ ಸ್ವಾತಂತ್ರ್ಯ ಉದ್ಯಾನಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು.

**ಮನವಿಯಲ್ಲಿ ಈ ಕೆಳಕಂಡ ಹತ್ತು ಪ್ರಮುಖ ಬೇಡಿಕೆಗಳಿದ್ದವು.**

1. ಕಾಲ್ಪನಿಕ ವೇತನ ನಗದೀಕರಣದ ಬಗ್ಗೆ ಹೊರಟ್ಟಿ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವುದು.
2. ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುದಾನಿತ ಶಾಲಾ ಕಾಲೇಜು ನೌಕರರಿಗೂ ಯಥಾವತ್ತಾಗಿ ಜಾರಿಗೊಳಿಸುವುದು.
3. ಕುಮಾರ ನಾಯಕ್ ವರದಿಯನ್ನು ಜಾರಿಗೊಳಿಸಿ ವೇತನ ತಾರತಮ್ಯವನ್ನು ನಿವಾರಿಸುವುದು.
4. ಅನುದಾನಿತ ಶಾಲಾ ಮಕ್ಕಳಿಗೂ ಸಮವಸ್ತ್ರ ನೀಡುವುದು. ಶೈಕ್ಷಣಿಕ ಪ್ರವಾಸ ಸೌಲಭ್ಯ ವಿಸ್ತರಿಸುವುದು.
5. ಕನ್ನಡ ವಿಶೇಷ ಬಡ್ತಿಯನ್ನು ಅನುದಾನಿತ ಶಾಲಾ ಕಾಲೇಜು ನೌಕರರಿಗೂ ವಿಸ್ತರಿಸುವುದು.
6. 2006 ರ ನಂತರ ಸೇವೆಗೆ ಸೇರಿದ ಅನುದಾನಿತ ಶಾಲಾ ಕಾಲೇಜು ನೌಕರರಿಗೂ ಎನ್.ಪಿ ಎಸ್ ಸೌಲಭ್ಯವನ್ನು ಸರ್ಕಾರಿ ನೌಕರರಿಗೆ ನೀಡಿರುವಂತೆ ನಮಗೂ ನೀಡುವುದು.
7. ನಿವೃತ್ತಿ ಮತ್ತು ಮರಣದಿಂದ ಖಾಲಿಯಾದ ಹುದ್ದೆಗಳನ್ನು ನೇಮಕ ಮಾಡಿಕೊಡಲು ಅವಕಾಶ ಕಲ್ಪಿಸುವುದು.
8. ಪಾಲಿಟೆಕ್ನಿಕ್ ನೌಕರರಿಗೆ ನೀಡುತ್ತಿರುವ ಶೇಕಡ 80 ವೇತನವನ್ನು 100ಕ್ಕೆ ಹೆಚ್ಚಿಸುವುದು.
9. ಶಿಕ್ಷಕರ ಮತ್ತು ಮಕ್ಕಳ ಅನುಪಾತವನ್ನು ಪ್ರಾಥಮಿಕ ಶಾಲೆಗಳಲ್ಲಿ 40 ರಿಂದ 30ಕ್ಕೆ ನಿಗದಿ ಪಡಿಸುವುದು. ಪ್ರೌಢಶಾಲೆಗಳಲ್ಲಿ 70 ರಿಂದ 40 ಕ್ಕೆ ನಿಗದಿಪಡಿಸುವುದು.
10. ಎಲ್ಲಾ ಅನುದಾನಿತ ಶಾಲಾ ಕಾಲೇಜುಗಳ, ನೌಕರರಿಗೆ ಹೆಚ್.ಆರ್.ಎಂ.ಎಸ್ ಮೂಲಕ ವೇತನ ಪಾವತಿಸುವುದು ಹಾಗೂ ಖಜಾನೆ 2 ವ್ಯವಸ್ಥೆಯನ್ನು ಜಾರಿಗೊಳಿಸುವುದು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಾಧ್ಯಕ್ಷರಾದ ಅರುಣ್ ಶಹಾಪುರ ಒಳಗೊಂಡಂತೆ ಜೆ.ಎಂ ಜೋಷಿ, ಸೂಗೂರು ತಿಪ್ಪೇಸ್ವಾಮಿ ಹಾಗೂ ಮುಂತಾದ ಪದಾಧಿಕಾರಿಗಳು ಸಾವಿರಾರು ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಮಾನ್ಯ ಶ್ರೀ ಟಿ. ಖಾದರ್ ಆರೋಗ್ಯ ಸಚಿವರು ವೈದ್ಯಕೀಯ ಸೌಲಭ್ಯದ ಬೇಡಿಕೆ ಬಗ್ಗೆ ಪರಿಶೀಲಿಸುವ ಭರವಸೆಯಿತ್ತರು.

ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮಾಜಿ ಮುಖ್ಯ ಮಂತ್ರಿಗಳು ಮಾತನಾಡಿ ಶಿಕ್ಷಕರ ನ್ಯಾಯಯುತವಾದ ಈ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿದರು.

# ಸಾಧಕರನ್ನು ಸ್ಮರಿಸೋಣ

## ಕರ್ತವ್ಯ ಪಾಲನೆಯ ಪರಾಕಾಷ್ಠೆ

1979 ರ ಮಾತು. ಭಾರತದ ಈಗಿನ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಮ್ ಸ್ವದೇಶಿ ರಾಕೆಟ್ ತಂತ್ರಜ್ಞಾನ ವಿಕಾಸ ಪ್ರಕಲ್ಪದ ಪ್ರಮುಖರಾಗಿದ್ದರು. ಹಲವು ಅನುಭವಿ ವಿಜ್ಞಾನಿಗಳಿದ್ದ ಆ ತಂಡದ ಪ್ರತಿಯೊಬ್ಬರೂ ವಾರದಲ್ಲಿ 60 ರಿಂದ 80 ಗಂಟೆಗಳ ಕಾಲ ಸ್ವ–ಇಚ್ಛೆಯಿಂದ ಕೆಲಸ ಮಾಡುತ್ತಿದ್ದರು. ಸ್ವದೇಶಿ ರಾಕೆಟ್ ತಂತ್ರಜ್ಞಾನ ಸಿದ್ಧಿಯ ಪ್ರಬಲ ಹಂಬಲವು ಅವರಿಗೆ ಹಸಿವು, ಆಯಾಸ, ನಿದ್ದೆ ಎಲ್ಲವನ್ನೂ ಮರೆಸಿಬಿಟ್ಟಿತು. ಎಸ್.ಎಲ್.ವಿ –2 ಉಡಾವಣೆಯ ದಿನ ಮತ್ತು ಸಮಯ ಅದಾಗಲೇ ನಿರ್ಧಾರಿತವಾಗಿತ್ತು. ಎಲ್ಲರೂ ಆ ಗಳಿಗೆಯನ್ನು ಕಾತರದಿಂದ ನಿರೀಕ್ಷಿಸುತ್ತಿದ್ದರು.

ಅಂತಿಮ ಹಂತದಲ್ಲಿ ಆ ಗಗನ ನೌಕೆಯ ಕೂಲಂಕುಷ ಪರೀಕ್ಷೆ ನಡೆಯುತ್ತಿರ್ದ್ದಾಗ ಒಂದು ಕವಾಟ ಸರಿಯಿಲ್ಲದಿದ್ದುದು ಗಮನಕ್ಕೆ ಬಂತು. ಎರಡನೇ ಬಾರಿಯ ಜಟಿಲ ಪರೀಕ್ಷೆಯ ಸಮಯದಲ್ಲಿ ತಂಡದ ಆರೂ ಸದಸ್ಯರೂ ಮಗ್ನರಾಗಿದ್ದರಾಗಲೇ ನೈಟ್ರಿಕ್ ಆಸಿಡ್ ಟ್ಯಾಂಕ್ ಸಿಡಿಯಿತು. ಅವರೆಲ್ಲ ಗಂಭೀರವಾಗಿ ಗಾಯಗೊಂಡರು. ಶರೀರದಲ್ಲಿ ಸುಟ್ಟ ಗಾಯಗಳುಂಟಾದ ಅವರನ್ನು ಆಸ್ಪತ್ರೆಗೆ ಒಯ್ಯಲಾಯಿತು. ತಂಡದ ಮುಖ್ಯಸ್ಥ ಅಬ್ದುಲ್ ಕಲಾಮ್ ಹಾಗೂ ಅವರ ಮುಖ್ಯ ಜೊತೆಗಾರ ಡಾ|| ಕುರೂಪ್ ಚಿಂತಾಮಗ್ನರಾಗಿ ರಾತ್ರಿಯಿಡೀ ಗಾಯಾಳುಗಳೊಡನೆ ಇದ್ದರು.

ಗಾಯಾಳುಗಳಲ್ಲೊಬ್ಬರಾದ ಶ್ರೀ ರಾಮಕೃಷ್ಣನ್ ನಾಯರ್‌ಗೆ ಬೆಳಗಿನ ಜಾವ 3 ಗಂಟೆಗೆ ಪ್ರಜ್ಞೆ ಬಂತು. ಅವರ ಬಾಯಿಂದ ಹೊರಟ ಮೊದಲ ಮಾತೇ ಅಯ್ಯೋ ಹೀಗಾಯಿತಲ್ಲಾ ಎಂದು, ತನಗಾದ ಸುಟ್ಟ ಗಾಯಕ್ಕಿಂತ ಉಡಾವಣೆ ವಿಳಂಬವಾಯಿತೆಂಬ ದುಃಖ ಅವರಿಗೆ. ಆ ಗಂಭೀರ ಸ್ಥಿತಿಯಲ್ಲೂ ಅವರು ದುರ್ಘಟನೆಯ ಕಾರಣದಿಂದ ಉಡಾವಣೆ ತಡವಾಗಿದೆ, ತಕ್ಷಣವೇ ಅದನ್ನು ಸರಿಮಾಡಿ ಉಡಾಯಿಸುತ್ತೇವೆ ಎಂಬ ಭರವಸೆ ಡಾ|| ಕಲಾಮ್‌ರವರಿಗೆ ನೀಡಿದರು.

ಅತ್ಯಂತ ಗಂಭೀರ ಪರಿಸ್ಥಿತಿಯಲ್ಲೂ ಕೆಲಸದ ಕುರಿತು ಅವರ ಚಿಂತೆ ಹಾಗೂ ಶ್ರದ್ಧೆ ವಿಶ್ವಾಸಗಳು ಎಲ್ಲರ ಹೃದಯವನ್ನು ಕಲಕಿದುವು.



ಶಿಕ್ಷಣ ಸೇವಾಕಾಂಕ್ಷಿ
ಹೆಚ್ಚೆನ್ನಾರ್

---



# ಶ್ರದ್ಧಾಂಜಲಿ

ಶ್ರೇಷ್ಠ ವಿಜ್ಞಾನಿಯೂ, ಆದರ್ಶ ಶಿಕ್ಷಕರೂ, ಭಾರತದ ರಾಷ್ಟ್ರಪತಿಗಳೂ ಆಗಿದ್ದ ಡಾ|| ಎ.ಪಿ.ಜೆ ಅಬ್ದುಲ್ ಕಲಾಂ 27.7.2015 ರಂದು ಹಠಾತ್ತಾಗಿ ವಿಧಿವಶರಾದುದು ದೇಶದ ದೌರ್ಭಾಗ್ಯ. ಡಾ|| ಕಲಾಂ ಅವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

## ಮರೆಯಾದ ಮರೆಯಲಾಗದ ಮಾಣಿಕ್ಯ

ಭಾರತ ದೇಶ ಇಡೀ ವಿಶ್ವದಲ್ಲಿಯೇ ಹೆಮ್ಮೆಯ ಪ್ರತೀಕ, ಅಂತಹ ಭಾರತದ ಹಿರಿಮೆ–ಗರಿಮೆಯನ್ನು ಹೆಚ್ಚಿಸಿದ ಮಹಾನುಭಾವ ನೀವು. ಯಾವುದೇ ಕೆಲಸಕ್ಕಾದರೂ ಭಾರತಮಾತೆ ಇನ್ನೊಬ್ಬರ ಮೇಲೆ ನಿರ್ಭರವಾಗಬಾರದೆಂದು, ಅತ್ಯುನ್ನತ ಕನಸು ಕಂಡು ಅದನ್ನು ಸಾಕಾರಗೊಳಿಸಿಕೊಂಡ ಅದ್ಭುತ ಕನಸುಗಾರ. ಇಡೀ ದೇಶವೇ ತನ್ನ ಕುಟುಂಬವೆಂದು ತಿಳಿದುಕೊಂಡ ತನುಜ. ನೀವಷ್ಟೇ ಅಲ್ಲಾ, ನಾವೂ ಸಹ ನಿಮ್ಮನ್ನು ನಮ್ಮ ಕುಟುಂಬದವರೆಂದೇ ತಿಳಿದುಕೊಂಡಿದ್ದೆವು. ನಿಮ್ಮನ್ನು ನೋಡಿದಾಗಲೆಲ್ಲಾ ಏನೋ ಒಂದು ಧೈರ್ಯ, ಹೆಮ್ಮೆ ಮೂಡುತ್ತಿತ್ತು. ನಿಮ್ಮಂತಹವರನ್ನು ಪಡೆದುಕೊಂಡ ಭಾರತಮಾತೆಯೇ ಧನ್ಯೆ. ಬೋಧನೆ, ಅಧ್ಯಯನ, ಉಪನ್ಯಾಸ, ವಿದ್ಯಾರ್ಥಿಗಳೊಂದಿಗೆ ಸಂವಾದ, ಒಂದೇ ಎರಡೇ. ಏನು ಹೇಳಲಿ, ಏನು ಬರೆಯಲಿ. ಒಬ್ಬ ಶಿಕ್ಷಕನಾದವನಿಗೆ ಅಧ್ಯಯನ, ಅಧ್ಯಾಪನವೇ ಜೀವನ. ವಿದ್ಯಾರ್ಥಿಗಳೇ ಅವರ ಮಕ್ಕಳು. ಉಪನ್ಯಾಸ ಮಾಡುತ್ತಲೇ ಪ್ರಾಣ ಬಿಡುವುದೆಂದರೆ! ದೇವರು ಕೊಟ್ಟಂತಹ ಸಾವಾ ಅಥವಾ ನೀವೇ ಕೇಳಿ ಪಡೆದುಕೊಂಡ ಸಾವೇ? ಅಥವಾ ನಿಮ್ಮ ಒಳ್ಳೆಯತನವನ್ನು ನೋಡಿ ದೇವರು ಕೊಟ್ಟಂತಹ ವರವೇ? ಪ್ರತಿಯೊಬ್ಬ ಶಿಕ್ಷಕನೂ ಇಷ್ಟಪಡುವಂತಹ ಸಾವು.

ಧರ್ಮ, ಜಾತಿ ಎಲ್ಲಾ ಎಲ್ಲೆಯನ್ನು ಮೀರಿದ ಭಾರತಮಾತೆಯ ಪುತ್ರ ನೀವು. ತಾಯಿಯ ಗೌರವವನ್ನು ಹೆಚ್ಚಿಸಿದ ಪುತ್ರ ನೀವು. ನಿಮ್ಮನ್ನು ಕಳೆದುಕೊಂಡ ನಮಗೆ ಆತಂಕ, ಗಾಬರಿ, ಎಲ್ಲವೂ ಆಗುತ್ತಿದೆ. ಆದರೂ ನೀವು ನಡೆಸಿದ ಜೀವನ, ಸಾಧಿಸಿದ ಸಾಧನೆ, ಎಲ್ಲವೂ ಆದರ್ಶಪ್ರಾಯ. ಅವನ್ನೇ ಮಾರ್ಗದರ್ಶಕವಾಗಿಟ್ಟುಕೊಂಡು ಜೀವನ ನಡೆಸುವ ಪಣವನ್ನು ನಾವೆಲ್ಲಾ ಮಾಡುತ್ತಿದ್ದೇವೆ.

ಅಶ್ರುತರ್ಪಣದೊಂದಿಗೆ ಭಾರತಮಾತೆಯ ಅಗ್ರಜ ಅಬ್ದುಲ್ ಕಲಾಂ ನಿಮಗೆ ಕೋಟಿ–ಕೋಟಿ ಸಲಾಂ.

ಮಮತಾ, ಸಹಶಿಕ್ಷಕಿ , ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ

# ಗುರುಪೂರ್ಣಿಮೆಯಂದು ವಿವಿಧೆಡೆಗಳಲ್ಲಿ ನಡೆದ ಗುರುವಂದನಾ ಚಿತ್ರಗಳು



ಗುಲ್ಬರ್ಗಾದಲ್ಲಿ ಗುರುವಂದನಾ 6–8–2015



ಗದಗದಲ್ಲಿ ಗುರುವಂದನಾ 4–8–2015



ಮೈಸೂರಿನಲ್ಲಿ ಗುರುವಂದನಾ 2–8–2015



ಬೆಂಗಳೂರು ದಕ್ಷಿಣದಲ್ಲಿ ಗುರುವಂದನಾ 1–8–2015


IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.





Registered No. RNI 45459/85
RNP/KA/BGS-125/2015-2017
Posted at Bangalore PSO
Bangalore -560 026

AUGUST 2015
Date of Posting
20th or 21st of every month


srushtidesigns@gmail.com